₹ 5/-

# ನೇಸರು
## ತಿಂಗಳೋಲೆ

PAGES 20

NOVEMBER 2024 Nesaru Tingalole Vol. XLII - 11




ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಗಂಗಾ ಸಮಾರಾಧನೆ

ಅಸೋಸಿಯೇಷನ್‌ನಿಂದ 22 ಸದಸ್ಯರು ವಾರಣಾಸಿಯ ಯಾತ್ರೆ ಮುಗಿಸಿ ಹಿಂದಿರುಗಿದ್ದು ಈಗಾಗಲೇ ವರದಿಯಾಗಿದೆ. ಈ 22 ಸದಸ್ಯರೂ ಸೇರಿ ಇದೇ ಅಕ್ಟೋಬರ್ 27, ಭಾನುವಾರದಂದು ಅಸೋಸಿಯೇಷನ್‌ನಲ್ಲಿ ಗಂಗಾ ಸಮಾರಾಧನೆಯನ್ನು ಸದಸ್ಯರಿಗೆ ನೀಡಿದರು.



ಶ್ರೀಮತಿ ಪದ್ಮಾ ಮತ್ತು ಶ್ರೀ ರವಿ ಕುಳಿತು ರುದ್ರಾಭಿಷೇಕವನ್ನು ಮಾಡಿದರು. ಮಿಕ್ಕ ಸದಸ್ಯರೂ ಕೂಡಿ, ಗಣಪತಿಯ ಆರಾಧನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ನಾವು 'ಕಾಶಿ' ಎಂದರೇನು? 'ಕಾಶಿ ಯಾತ್ರೆ' ಯನ್ನು ಮಾಡುವುದೇಕೆ? ಎನ್ನುವುದನ್ನು ತಿಳಿಯುವುದು ಒಳ್ಳೆಯದು.

ಸಂಸ್ಕೃತದಲ್ಲಿ 'ಕಾಶಿ' ಎಂದರೆ 'ಬೆಳಕು' ಎಂದರ್ಥ. ಇದರಿಂದಲೇ 'ಆಕಾಶ', 'ಪ್ರಕಾಶ' ಪದಗಳೂ ಜನ್ಯ, 'ಕಾಶಿ' ಎಂದರೆ ಬೆಳಕು ಕೂಡಿರುವ ಜಾಗ ಎಂದು. ಇಲ್ಲಿಯೇ ಒಂದು ಜೋತಿರ್ಲಿಂಗ ಇರುವುದು. ತಿಳುವಳಿಕೆಯ ಬೆಳಕು ಇಲ್ಲಿಯೇ ಒಟ್ಟುಗೂಡಿರುವುದು. ಶಿವ 'ಆಸೆ'ಯನ್ನು ಸುಟ್ಟವನು. ಸುಟ್ಟ ಮೇಲೆ ಉಳಿಯುವುದು ಬೂದಿ. ಅದನ್ನೇ ಮೈಗೆಲ್ಲಾ ಹಚ್ಚಿ ತಿರುಗಾಡುವವನು. ಮೊದಲು ಹಾಗೂ ಈಗಲೂ ಕಾಶಿ ಒಂದು ಸ್ಮಶಾನ ಸ್ಥಾನ. ಅಲ್ಲಿ ತಿರುಗಾಡುವವನು ಭೂತನಾಥ.

ನಮ್ಮಲ್ಲಿ ನಾಲ್ಕು ಆಶ್ರಮಗಳು ಜೀವನದಲ್ಲಿವೆ.

**ಮೊದಲನೆಯದು – ಕೌಮಾರ್ಯ:** ಈ ಘಟ್ಟದಲ್ಲಿ ಮಗು ವಿದ್ಯಾಭ್ಯಾಸ ಮಾಡಿ, ತಿಳುವಳಿಕೆಯನ್ನು ಪಡೆಯುತ್ತದೆ. ಈ ತಿಳುವಳಿಕೆಯನ್ನು ತಂದೆ ತಾಯಿಯರಿಂದ ಪಡೆಯತಕ್ಕದ್ದು.

**ಎರಡನೆಯದು– ಬ್ರಹ್ಮಚರ್ಯ** – ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು, ತನ್ನ 8ನೆಯ ವರ್ಷದಲ್ಲಿ ಮಗು ಗುರುಗಳ ಆಶ್ರಮಕ್ಕೆ ಹೋಗಿ, ಒಂದು ಕಲೆಯನ್ನು ಕಲಿಯುತ್ತದೆ. ಇದು ತನ್ನ ಮುಂದಿನ ಜೀವನಕ್ಕಾಗಿ.

**ಮೂರನೆಯದು –** ಮಾನವ ಗುರುಕುಲವನ್ನು ಮುಗಿಸಿ ಮತ್ತೆ ತಂದೆ ತಾಯಿಯರ ಮನೆಗೆ ಬಂದಾಗ, ಅವನು ಗೃಹಸ್ಥಾಶ್ರಮವನ್ನು ಮುಂದುವರೆಸಬೇಕು. ಏಕೆಂದರೆ ಸಮುದಾಯ ಬೆಳೆಯಬೇಕಾದರೆ ಗೃಹಸ್ಥಾಶ್ರಮದಿಂದಲೇ ಸಾಧ್ಯ. ಮಕ್ಕಳನ್ನು ಪಡೆದು ಅವರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸಿ, ಸಂಪತ್ತನ್ನು ಕೂಡಿಸುತ್ತಾನೆ. ಗೃಹಸ್ಥನಿಗೆ ಮುಖ್ಯವಾದ ಕಾಮ, ಅರ್ಥ, ಧರ್ಮ. ಅದರ ಸಂಕೇತವಾಗಿ ಅವನು ಮೂರು ಎಳೆಯ ಜನಿವಾರವನ್ನು ಹಾಕಿಕೊಳ್ಳುತ್ತಾನೆ. ಈ ಜನಿವಾರವನ್ನು ಹಾಕಿಕೊಳ್ಳುತ್ತಾನೆ. ಈ ಜನಿವಾರ ಕೇವಲ ಬ್ರಾಹ್ಮಣರಿಗೆ ಅಲ್ಲ. ಎಲ್ಲಾ ವರ್ಣದವರಿಗೂ ಉಂಟು. ಗೃಹಸ್ಥನಾದವನಿಗೆ ಕಾಮ–ಆಸೆ ಇರಲೇಬೇಕು. ತಾನು ಜೀವನದಲ್ಲಿ ಏನಾದರೂ ಹೆಚ್ಚಿನ ಮಟ್ಟವನ್ನು ಏರಬೇಕು. ಅದಕ್ಕೆ ಧನಸಹಾಯ ಬೇಕೇ ಬೇಕು. ಆದ್ದರಿಂದ ಧನ–ಅರ್ಥವನ್ನು ಗಳಿಸಲೇ ಬೇಕು. ಆದರೆ ಧನ ಕೂಡಿದಾಗ ಗರ್ವ ಮದ ಹೆಚ್ಚಾಗುತ್ತದೆ. ಅದನ್ನು ಹತ್ತಿಡಲು ಒಂದು ನೀತಿಯನ್ನು ಅನುಸರಿಸಬೇಕು. ಅದೇ ಧರ್ಮ.

**ನಾಲ್ಕನೆಯದು –** ಎಲ್ಲಾ ಗಳಿಸಿ, ಮಕ್ಕಳನ್ನು ಬೆಳೆಸಿ ಅವರಿಗೆ ವಿದ್ಯೆ – ಸಂಪಾದನೆಯ ದಾರಿಯನ್ನು ಹತ್ತಿಸಿದ ಮೇಲೆ, ಗೃಹಸ್ಥ. ಎಲ್ಲಾ ವಹಿವಾಟನ್ನೂ ಮಕ್ಕಳಿಗೆ ಬಿಟ್ಟು, ತಾನು ಕಾಡಿನ ದಾರಿ ಹಿಡಿಯಬೇಕು. ಇದು ವಾನಪ್ರಸ್ಥಾಶ್ರಮ. ಹೀಗೆ 60 ವರ್ಷಕ್ಕೆ 'ಶಾಂತಿ'ಯನ್ನು ಮಾಡಿಕೊಂಡು ಎಲ್ಲವನ್ನೂ ಮಕ್ಕಳಿಗೆ ಬಿಟ್ಟು ಹೋಗುವ ಮುನ್ನ 'ಕಾಶಿಯಾತ್ರೆ' ಯನ್ನು ಮಾಡುತ್ತಾನೆ. ಅಲ್ಲಿ ಗಂಗೆಯಲ್ಲಿ ಸ್ನಾನ ಮಾಡಿ, ಪಾಪಗಳನ್ನೆಲ್ಲಾ ತೊಳೆದುಕೊಂಡು, ಶಿವನ ದರ್ಶನ ಮಾಡಿದ ಮೇಲೆ, ಬಾಳಿನಲ್ಲಿ ತಾನು ನಡೆದು ಬಂದ ದಾರಿಗೆ ಈಗ ಬೆಳಕು ಸಿಕ್ಕಿತು ಎಂಬುದನ್ನು ತಿಳಿಯುತ್ತಾನೆ. ಮತ್ತೆ ತನ್ನ ಮನೆಗೆ ಹಿಂದಿರುಗಿ ಈ ಜ್ಞಾನ ಸಂಪಾದನೆಯ ಅಂಗವಾಗಿ, 'ಗಂಗಾ ಸಮಾರಾಧನೆ' ಯನ್ನು ಮಾಡಿ ಎಲ್ಲರಿಗೂ ಅನ್ನದಾನ ಮಾಡುತ್ತಾನೆ. ಆಮೇಲೆ ಹತ್ತನೆಯ ದಿನದಂದು, ತನ್ನ ಹೆಂಡತಿಯೊಡನೆ ಕಾಡಿಗೆ ಹೋಗುತ್ತಾನೆ.. ಇದು ಸನಾತನ ಧರ್ಮದ ನೀತಿ.

ಸನ್ಯಾಸಾಶ್ರಮ ನಮ್ಮ ಸನಾತನ ಧರ್ಮದ ಅಂಗವಲ್ಲ. ಆದರೆ ಜೈನ – ಬೌದ್ಧ ಧರ್ಮಗಳು ಸನ್ಯಾಸಿಗಳಿಂದೇ ಮಾಡಿದ ಧರ್ಮಗಳು. ಅದು ಗೃಹಸ್ಥರಿಗಲ್ಲ. ಕಾಲ ಕ್ರಮೇಣ, ತಿಳುವಳಿಕೆ ಹೆಚ್ಚಾಗುವುದು ಬಿಟ್ಟು, ದಡ್ಡತನವೇ ಆವರಿಸಿದಾಗ ಈಗ ಸನ್ಯಾಸಾಶ್ರಮವೂ ಸನಾತನ ಧರ್ಮದ ಅಂಗ ಎಂದು ತಿಳಿಯುತ್ತಾರೆ. ಮಹಾಭಾರತದ ಮೋಕ್ಷ ಸಾಧನ ಪರ್ವದಲ್ಲಿ, ಭೀಷ್ಮ ಸನ್ಯಾಸಾಶ್ರಮವನ್ನು ಹೀಗಳಿಯುವುದು ಕಂಡುಬರುತ್ತದೆ. ಭೀಷ್ಮನೇನೂ ಸನ್ಯಾಸಿಯಲ್ಲ ಆದರೆ ಗೃಹಸ್ಥನೂ ಅಲ್ಲ. ಆದರೆ ಅವನ ಆ ಮಾತುಗಳು ಇದರ ಮೇಲೆ ಬೆಳಕು ಬೀರುತ್ತವೆ.

ಅಸೋಸಿಯೇಷನ್ ಸದಸ್ಯರಲ್ಲಿ 60 ವರ್ಷ ಮುಟ್ಟಿದವರೂ ಇದ್ದರು. ಎಳೆಯರೂ ಇದ್ದರು. ಆದರೆ ಜ್ಞಾನಾರ್ಜನೆಗೆ ಯಾವ ವಯಸ್ಸೂ ಅಡ್ಡಿ ಇಲ್ಲ. ಗಂಗಾ ಸಮಾರಾಧನೆಯನ್ನು ನೀಡಿದವರು:

ಗಣಪತಿ ಶಂಕರಲಿಂಗ್ – ರೇಷ್ಮಾ, ನಾರಾಯಣ ನವಿಲೇಕರ್ – ಸರಿತಾ, – ಶಶಿಕಾಂತ ಜೋಶಿ – ವೀಣಾ

ಡಾ. ಮಂಜುನಾಥ್ – ಕೆ. ಮಂಜುನಾಥಯ್ಯ, ಮಂಜು ದೇವಾಡಿಗ – ಸೀತಾ, – ವಿಜಯಾ – ಯದು ಕೀರ್ತಿ

ಲೀಲಾ ಬನವಾಸಿ – ಶ್ಯಾಮಲಾ ರಾಧೇಶ್, ರವಿ – ಪದ್ಮಾ, ಸುರೇಶ – ಪೂರ್ಣಿಮಾ, ಭವಾನಿ – ಲಕ್ಷ್ಮೀ ಕುರ್ಸೆ

ವಿಶಾಲ ದೇವಾಡಿಗ – ನಮಿತಾ ಹಾಗೂ ಅನ್ವಿ

ಈ ಎಲ್ಲರೂ ಮುಂದೆ ಶಿವನ ಮಾದರಿಯಲ್ಲಿಯೇ ನಡೆಯುವುದು ದಿಟ.

**ಸತ್ಯಂ – ಶಿವಂ – ಸುಂದರಂ**

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ

ಸಂಪುಟ - 42 ನವೆಂಬರ್- 2024 ಸಂಚಿಕೆ-11

# ಅಜಾತಶತ್ರು – ಶ್ರೀಯುತ ರತನ್ ಟಾಟಾ



✍ **ಡಾ. ಜ್ಯೋತಿ ಸತೀಶ್**

ಈ ಜಗತ್ತಿನಲ್ಲಿ ಹುಟ್ಟು ಸಾವು ಸರ್ವೇ ಸಾಮಾನ್ಯ. ಹುಟ್ಟಿದವರೆಲ್ಲ ಒಂದಲ್ಲ ಒಂದು ದಿನ ಮಣ್ಣು ಸೇರಲೇಬೇಕು. ಆದರೆ ಬದುಕಿರುವಷ್ಟು ದಿನ ಹೇಗೆ ಬದುಕಬೇಕು ಅನ್ನೋದಕ್ಕೆ ಜೀವಂತ ಉದಾಹರಣೆ ಮೊನ್ನೆ ಮೊನ್ನೆಯಷ್ಟೇ ನಮ್ಮನ್ನಗಲಿದ ಖ್ಯಾತ ಉದ್ಯಮಿ ಶ್ರೀಯುತ ರತನ್ ಟಾಟಾ ಅವರ ಬದುಕು. ಅಜಾತ ಶತ್ರು ರತನ್ ಟಾಟಾ ಅವರ ಬದುಕು ನಮಗೆಲ್ಲರಿಗೂ ಪ್ರೇರಣೆದಾಯಕವಾದುದು, ಆದರ್ಶಪ್ರಾಯವಾದುದು. ರತನ್ ಟಾಟಾ ಅವರು ಜೀವನದಲ್ಲಿ ನಾವು ತೆಗೆದುಕೊಂಡ ನಿರ್ಧಾರಗಳನ್ನು ಹೇಗೆ ಸರಿ ಅಂತ ಸಾಬೀತು ಮಾಡಬೇಕು ಅನ್ನೋದರಲ್ಲಿ ನಂಬಿಕೆಯನ್ನು ಇಟ್ಟವರು. ಕಬ್ಬಿಣವನ್ನು ನಾಶಮಾಡಲು ಸಾಧ್ಯವಿಲ್ಲ. ಆದರೆ ಅದಕ್ಕೆ ಹಿಡಿವ ತುಕ್ಕಿನಿಂದಾಗಿ ಕಬ್ಬಿಣವನ್ನು ನಾಶಮಾಡಬಹುದು. ಹಾಗೆಯೇ, ಯಾರೂ ಯಾರನ್ನೂ ನಾಶಮಾಡಲು ಸಾಧ್ಯವಿಲ್ಲ. ಅವರೊಳಗಿನ ಮನಸ್ಥಿತಿಯೇ ಅವರ ನಾಶಕ್ಕೆ ಕಾರಣವಾಗಬಹುದು. ಪರೋಕ್ಷವಾಗಿ ನಮ್ಮಲ್ಲಿರುವ ದೌರ್ಬಲ್ಯಗಳೇ ನಮ್ಮ ವಿಫಲತೆಗೆ ಕಾರಣ ಅನ್ನೋದನ್ನು ಅವರು ಎತ್ತಿ ಹಿಡಿದಿರುವುದನ್ನು ಕಾಣಬಹುದು.

ರತನ್ ಅವರು ಉದ್ಯಮ ಮತ್ತು ಸಮಾಜಕ್ಕೆ ಅಸಾಧಾರಣ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವರ ದೂರದೃಷ್ಟಿಯ ನಾಯಕತ್ವ, ಕಾರ್ಯತಂತ್ರದ ಕುಶಾಗ್ರಮತಿ ಮತ್ತು ಸಾಮಾಜಿಕ ಜವಾಬ್ದಾರಿಗೆ ಅಚಲವಾದ ಬದ್ಧತೆಯು ಟಾಟಾ ಉದ್ಯಮವನ್ನು ಇವತ್ತು ಉತ್ತುಂಗಕ್ಕೆ ಏರಿಸುವುದರ ಜೊತೆಗೆ, ಜಾಗತಿಕ ಮಟ್ಟದಲ್ಲಿ ಶಕ್ತಿಕೇಂದ್ರವನ್ನಾಗಿ ಪರಿವರ್ತಿಸಿದೆ. ಅವರ ಯಶಸ್ಸಿನ ಕಥೆಯು ನಮ್ಮ ಯುವಪೀಳಿಗೆಗೆ ಸ್ಫೂರ್ತಿಯಾಗಿದೆ. ರತನ್ ಅವರು ಹೇಳುವಂತೆ "ಜೀವನದಲ್ಲಿ ಏರಿಳಿತಗಳು ಸಹಜ. ಇವು ನಮ್ಮನ್ನು ಮುಂದುವರಿಯಲು ಪ್ರೇರೇಪಿಸುತ್ತದೆ. ಕಷ್ಟಸುಖಗಳು ಒಂದೇ ರೇಖೆಯಲ್ಲಿ ಬರಲು ಸಾಧ್ಯವಿಲ್ಲ. ಏರಿಳಿತಗಳು ಬೇಕೇ ಬೇಕು. ಇಸಿಜಿ ಮಾಡುವಾಗಲೂ ಸಹ ಸರಳ ರೇಖೆಯಲ್ಲಿ ಬಂದರೆ, ನಾವು ಜೀವಂತವಾಗಿಲ್ಲ ಅಂತ ಅರ್ಥ". ರತನ್ ಅವರು ಯಾವಾಗಲೂ ಧನಾತ್ಮಕವಾಗಿ, ಸೃಜನಾತ್ಮಕವಾಗಿ ಯೋಚಿಸುತ್ತಾ, ನಿರಂತರವಾಗಿ ತಮ್ಮ ತಂಡವನ್ನು ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರಂತೆ. ಹಾಗಾಗಿ ಮಾರುಕಟ್ಟೆಗೆ ತಕ್ಕಂತೆ ತಂತ್ರಜ್ಞಾನವನ್ನು ಅಳವಡಿಸಿ ಉತ್ಪನ್ನಗಳನ್ನು ಹೊರತರುವತ್ತ ಚಿಂತಿಸುತ್ತಿದ್ದರು. ಇನ್ನೊಬ್ಬರ ಏಳಿಬೀಳುಗಳಿಗೆ ಹಲುಬುದಕ್ಕಿಂತ, ತನ್ನಲ್ಲಿರುವ ಶಕ್ತಿ, ಸಾಮರ್ಥ್ಯ, ಪ್ರಾಮಾಣಿಕತೆ, ಕಠಿಣ ಪರಿಶ್ರಮಕ್ಕೆ ಒತ್ತುಕೊಟ್ಟು ಜೀವನದಲ್ಲಿ ಮೇಲೆ ಬರಬೇಕು.

ರತನ್ ಟಾಟಾ ಅವರು ಎಲ್ಲರೊಂದಿಗೆ ಗೌರವದಿಂದ ವರ್ತಿಸುತ್ತಿದ್ದರಂತೆ. ಭವಿಷ್ಯ ಏನೆಂದು ನನಗೆ ತಿಳಿದಿಲ್ಲ. ಆದರೆ ನನ್ನ ಕಠಿಣ ಪ್ರರಿಶ್ರಮ ಹಾಗೂ ಪೂರ್ವ ತಯಾರಿಯಿಂದ ನನ್ನ ಭವಿಷ್ಯವನ್ನು ಬದಲಾಯಿಸಿಕೊಳ್ಳಬಲ್ಲೆ ಅನ್ನೋ ಆತ್ಮವಿಶ್ವಾಸ ಅವರಲ್ಲಿತ್ತು. ಪ್ರತಿ ಹೆಜ್ಜೆಗೂ ಅವರು ಹೇಳುತ್ತಿದ್ದದ್ದು ಒಂದೇ. 'ಯಶಸ್ಸು ನಿಮ್ಮ ತಲೆ ಮೇಲೆ ಹತ್ತಲು ಬಿಡಬೇಡಿ ಮತ್ತು ವೈಫಲ್ಯವು ನಿಮ್ಮ ಹೃದಯದಲ್ಲಿ ಕೂರಲು ಬಿಡಬೇಡಿ' ಅನ್ನೋದು. ಕೋಟ್ಯಾದಿಪತಿಯಾದರೂ ಎಷ್ಟೊಂದು ಸರಳ ವ್ಯಕ್ತಿತ್ವ ಅವರದು. ದೇಶದ ಶಿಕ್ಷಣ, ಆರೋಗ್ಯ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರದ ಏಳಿಗೆಗೆ ದಾನ ಮಾಡಿದ್ದು ಮಾತ್ರವಲ್ಲದೆ, ಮಾತು ಬಾರದ ಅದೆಷ್ಟೋ ಮೂಕ ಪ್ರಾಣಿಗಳಿಗೆ ಆಶ್ರಯವನ್ನು ಕಲ್ಪಿಸಿದರಲ್ಲ ಅದು ಅವರ ಮಾನವೀಯತೆಗೆ ಸಾಕ್ಷಿ. ಇಂತಹ ವ್ಯಕ್ತಿ ನಮ್ಮವರು, ಭಾರತೀಯರು ಅನ್ನೋದಕ್ಕೆ ನಾವು ಹೆಮ್ಮೆ ಪಡಬೇಕು. ರತನ್ ಟಾಟಾ ಅವರು ಸತ್ತಾಗ, ಜಾತಿ ಧರ್ಮವನ್ನು ಮರೆತು, ಇಡೀ ದೇಶವೇ ಒಟ್ಟಾಗಿ ಸಂತಾಪವನ್ನು ಸೂಚಿಸಿ ಶೋಕಾಚರಣೆಯನ್ನು ಮಾಡಿತ್ತಲ್ಲ, ಅದು ಅವರ ಸಾಧನೆ. ರತನ್ ಅವರು ಈ ದೇಶಕ್ಕಾಗಿ ಕೊಟ್ಟ ಕೊಡುಗೆಗಳು ಅಪಾರ. ಹಾಗಾಗಿ ಅವರ ಹೆಸರು ಸಾವಿರಾರು ವರ್ಷ ಅಜರಾಮರವಾಗಿ ಉಳಿಯುತ್ತದೆ. ಎಲ್ಲರ ಪ್ರೀತಿ, ವಿಶ್ವಾಸ, ಆಶೀರ್ವಾದವನ್ನು ತಮ್ಮ ಜೋಳಿಗೆಗೆ ತುಂಬಿಸಿಕೊಂಡು ಇಹಲೋಕ ತ್ಯಜಿಸಿದ್ದಾರೆ ರತನ್ ಅವರು. ಅಗಲಿದ ದಿವ್ಯ ಚೇತನಕ್ಕೆ ನಮ್ಮ ಹೃದಯಾಂತರಾಳದ ಗೌರವಪೂರ್ವಕ ನಮನಗಳು.

# ಶತಮಾನದ ಹೊಸ್ತಿಲಲ್ಲಿ ಮೈಸೂರು ಅಸೋಸಿಯೇಷನ್, ಮುಂಬೈ




✍ ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಸಂಘಟನೆಯಲ್ಲಿ ಮುಂಬೈ ಕನ್ನಡಿಗರದು ಎತ್ತಿದ ಕೈ. ಮೈಸೂರು ಅಸೋಸಿಯೇಷನ್ ಮಾಯಾನಗರಿ ಮುಂಬೈಯಲ್ಲಿ ಕಳೆದೊಂದು ಶತಮಾನದಲ್ಲಿ ಮಾಡಿದ ಸಾಂಸ್ಕೃತಿಕ ಪರಿಚಾರಿಕೆ ಬಲು ದೊಡ್ಡದು. ಮುಂಬೈನ ಐತಿಹಾಸಿಕ ಮಹತ್ವದ ಗೇಟ್ ವೇ ಆಫ್ ಇಂಡಿಯಾ ಕಟ್ಟಡವನ್ನು ಕಟ್ಟುವ ಕೆಲಸದಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ ಇಂಜಿನಿಯರ್ ಕನ್ನಡಿಗ ದಿವಾನ್ ಬಹಾದ್ದೂರ್ ರಾಮಸ್ವಾಮಿ ಅವರು ಈ ಸಂಸ್ಥೆಯ ನೇತೃತ್ವ ವಹಿಸಿ ಗೈದ ಸೇವೆ ಅನನ್ಯವಾದುದು. ಕನ್ನಡದ ಶ್ರೇಷ್ಠ ನಾಟಕಕಾರ ಟಿ. ಪಿ.ಕೈಲಾಸಂ ಕೆಲ ಕಾಲ ಇಲ್ಲಿ ನೆಲೆಸಿ ರಂಗ ಭೂಮಿಯ ಬೆಳವಣಿಗೆಗೆ ಶ್ರಮಿಸಿದ್ದು ವಿಶೇಷ.

ಒಂದು ಸಂಸ್ಥೆಯನ್ನು ಆರಂಭಿಸುವುದೆಂದರೆ ಒಂದು ಸಂಸ್ಕೃತಿಯನ್ನು ವಿಸ್ತರಿಸುವುದೆಂದೇ ಅರ್ಥ. ಮುಂಬಯಿ ಒಂದು ವಾಣಿಜ್ಯ ಮಹಾನಗರ. ಮುಂಬೈ ನಮ್ಮ ರಾಷ್ಟ್ರದ ಆರ್ಥಿಕ ಆಗುಹೋಗುಗಳ ಕೇಂದ್ರ ಬಿಂದುವೂ ಹೌದು. ಈ ವಾಣಿಜ್ಯ ಮಹಾನಗರದಲ್ಲಿಯ ಕನ್ನಡ ಸಂಸ್ಕೃತಿಗೆ ತನ್ನದೇ ಆದ ಒಂದು ಚಾರಿತ್ರಿಕ ಮಹತ್ವವಿದೆ. ಕನ್ನಡಿಗರು ತಮ್ಮ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿ ಬೆಳೆಸಲು ಇಲ್ಲಿ ನಿರಂತರವಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ ಅಂಶ.

ಮುಂಬಯಿಯಲ್ಲಿ ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಪ್ರಾಮಾಣಿಕವಾಗಿ ಮುನ್ನಡೆ ಸುತ್ತಿರುವ ಪ್ರಮುಖ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಶನ್ನದು ದೊಡ್ಡ ಹೆಸರು. ಕಳೆದ 99 ವರ್ಷಗಳಲ್ಲಿ ಹಂತ ಹಂತವಾಗಿ ಅದು ಏರಿದ ಎತ್ತರ, ಗೈದ ಸಾಧನೆ ಇತರ ಸಂಸ್ಥೆಗಳಿಗೆ ಅನುಕರಣೀಯ ಅಂಶ. ಕರ್ನಾಟಕ ಸರಕಾರ ಕೊಡಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಸಹ ಕನ್ನಡಿಗರ ಹೆಮ್ಮೆಯ ಸಂಸ್ಥೆಯಾದ ಮೈಸೂರು ಅಸೋಸಿಯೇಶನ್‌ಗೆ ಸಂದಿದೆ. ಶ್ರೇಷ್ಠ, ಸಕ್ರಿಯ ಹೊರನಾಡ ಕನ್ನಡ ಸಂಸ್ಥೆ ಎಂಬ ಕೀರ್ತಿಗೆ ಈ ಮೂಲಕ ಅದು ಬಹಳ ಹಿಂದೆಯೇ ಭಾಜನವಾಗಿತ್ತು.

ಮುಂಬೈ ಕನ್ನಡಿಗರ ಹೆಮ್ಮೆಯ ಸಂಸ್ಥೆ ಮೈಸೂರು ಅಸೋಸಿಯೇಷನ್ ಸಾಗಿ ಬಂದ ಹಾದಿ ಬಲು ರೋಚಕವಾಗಿದೆ.



ಸರ್.ಎಂ.ವಿಶ್ವೇಶ್ವರಯ್ಯನವರು ಬಾಂಬೆ ಪ್ರೆಸಿಡೆನ್ಸಿಯಲ್ಲಿ ಕಾರ್ಯನಿರತರಾಗಿದ್ದರಿಂದ, ಅವರ ಕೆಳಗೆ ಅನೇಕ ಮೈಸೂರಿನ ಇಂಜಿನಿಯರ್‌ಗಳು ಈ ಭಾಗದಲ್ಲಿ ಕೆಲಸ ಮಾಡಲು ಮುಂದೆ ಬಂದರು. ಆದರೆ ಇವರೆಲ್ಲರೂ ಕನ್ನಡದಲ್ಲಿಯೇ ವಿದ್ಯಾಭ್ಯಾಸ ಮಾಡಿ, ಕನ್ನಡತ್ವದ ಬಗ್ಗೆ ಹೆಮ್ಮೆ ಪಡುತ್ತಿದ್ದರಿಂದ, ಅವರಿಗೆ ಕನ್ನಡತನ ಅಂಟಿ ಕೊಂಡಿತ್ತು. ಮೈಸೂರು ಸಂಸ್ಥಾನ, ಮಾದರಿ ಸಂಸ್ಥಾನವೆಂದು ಹೆಸರಾಗಿ ಕಲೆಗಳ ಬೀಡಾಗಿ ಹೆಸರುವಾಸಿಯಾಗಿತ್ತು .

ಗುಬ್ಬಿ ನಾಟಕ ಕಂಪೆನಿ, ಅದಾಗಲೇ ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ನೀಡಿತ್ತು. ಆದ್ದರಿಂದ ಮುಂಬಯಿಗೆ ಬಂದ ಇಂಜಿನಿಯರ್‌ಗಳಿಗೆ ಇನ್ನಿತರ ತ0ತ್ರಜ್ಞರಿಗೆ ಕನ್ನಡ ಸಂಸ್ಕೃತಿಯ ಒಲವು ಹೆಚ್ಚಾಗಿತ್ತು.

ಅಂತೆಯೇ ಮನೆ ಅಡಿಗೆಗೆ ಮಾರುಹೋಗಿದ್ದ ಈ ಯುವಕರಿಗೆ, ಮುಂಬೈಯಲ್ಲಿ ಒಂದು ತಮ್ಮದೇ ಆದ ನೆಲೆ ಬೇಕಾಗಿತ್ತು. ಹೆಚ್ಚಾಗಿ ಈ ಯುವಕರೆಲ್ಲ, ಇಂದಿನ ಕೋಟೆ ಪ್ರದೇಶಕ್ಕೆ ಹತ್ತಿರವಿದ್ದ ಗಿರ್ಗಾಂನಲ್ಲಿ ಇರುತ್ತಿದ್ದರು. ಅಲ್ಲೇ ಒಂದು ಸಣ್ಣ ಕೋಣೆಯಲ್ಲಿ ಮಿತ್ರರೆಲ್ಲ ಪ್ರತಿ ಭಾನುವಾರ ಒಂದೆಡೆ ಸೇರಿ ಮಾತುಕತೆ ನಡೆಸುವ ನಿರ್ಧಾರಕ್ಕೆ 1925 ಆಗಸ್ಟ್ ತಿಂಗಳಲ್ಲಿ ಬರಲಾಯಿತು.

ಹೀಗೆ ಮೊದಲಾದ ಕೂಟ 8 ಜನರ ತಂಡ ಬೇಗ 40 ಆಯಿತು. ಸೇರುತ್ತಿದ್ದ ಕೋಣೆ ಸಣ್ಣದಾಯಿತು. ಆಡುತ್ತಿದ್ದ ಕೇರಂ, ಚೆಸ್‌ಗಳಿಗೆ ಜಾಗವಿಲ್ಲದಂತಾಯ್ತು, ಆಗ ಹೊಸದಾಗಿ ನಿರ್ಮಾಣವಾಗುತ್ತಿದ್ದ ಮಾಟುಂಗಾದ ನಪ್ಪು ಉದ್ಯಾನದ ಬಳಿ ಇದ್ದ ವೇಲ್‌ಜಿ ಬಾಯ್ ಹಾಲ್‌ನಲ್ಲಿ ಒಂದು ದೊಡ್ಡ ಕೋಣೆಯೊಂದನ್ನು ಬಾಡಿಗೆಗೆ ಪಡೆದುಕೊಂಡರು. ಹೀಗೆ ಮೈಸೂರು ಅಸೋಸಿಯೇಷನ್, ಮುಂಬಯಿ 1926 ರ ಫೆಬ್ರುವರಿ 26 ರಂದು ತನ್ನ ಅಸ್ತಿತ್ವವನ್ನು ಸ್ಥಾಪಿಸಿತು . ಆದರೆ ಈ ತಂಡಕ್ಕೆ ತಕ್ಕ ನಾಯಕರು ಬೇಕಿತ್ತು. ಈ ಯುವಕರು, ಆಗ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಚೀಫ್ ಇಂಜಿನಿಯರ್ ಆಗಿದ್ದ, ದಿವಾನ್ ಬಹಾದ್ದೂರ್ ರಾಮಸ್ವಾಮಿಯವರನ್ನು ಕೇಳಿಕೊಂಡರು. ಬಾಂಬೆ ರಾಮಸ್ವಾಮಿ ಎಂದೇ ಹೆಸರಾದ ಇವರು, ವಿಶ್ವೇಶ್ವರಯ್ಯನವರ ಕೆಳಗೆ ತರಬೇತಿ ಹೊಂದಿದವರಲ್ಲದೇ, ಗೇಟ್ ವೇ ಆಫ್ ಇಂಡಿಯಾವನ್ನು ಕಟ್ಟುವಾಗ ಅದರ ಮೇಲ್ವಿಚಾರಣೆಯಲ್ಲಿದ್ದರು.

ಈವತ್ತೂ ಕೂಡ, ಅವರ ಹೆಸರು ಗೇಟ್ ವೇ ಆಫ್ ಇಂಡಿಯಾದ ಒಳಗೆ ಕೆತ್ತಿರುವುದು ವಿಶೇಷ .

ಬಾಂಬೆ ರಾಮಸ್ವಾಮಿಯವರು ಮೈಸೂರು ಅಸೋಸಿಯೇಷನ್ ಬೆಳವಣಿಗೆಯಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿದರು. ಸ್ವತ: ಒಳ್ಳೆಯ ಲೇಖಕರಾಗಿದ್ದ ಚಂದ್ರಶೇಖರ ಶರ್ಮ ಅವರ ಮುಂದಾಳತ್ವದಲ್ಲಿ ಅಸೋಸಿಯೇಷನ್ ನಲ್ಲಿ ಒಂದು ಶಾಲೆಯು ಆರಂಭವಾಯಿತು. ಬಳಿಕ ಕಲಾವಿದ ಗಂಗಾಧರಯ್ಯನವರು ಒಂದು ನಾಟಕ ತಂಡವನ್ನು ಕಟ್ಟಿ ಬಸವಪ್ಪ ಶಾಸ್ತ್ರಿಗಳ ಶಾಕುಂತಲ ನಾಟಕವನ್ನು 1929ರಲ್ಲಿ ಇಲ್ಲಿನ ನಪ್ಪು ಹಾಲ್ ನಲ್ಲಿ ಪ್ರದರ್ಶನ ಮಾಡಿದರು.

ಇದೇ ಹೊತ್ತಿನಲ್ಲಿ ಬಾಂಬೆ ಮುನ್ಸಿಪಲ್ ಕಾರ್ಪೊರೇಷನ್ ದಾದರ್ ಮಾತಂಗ ಎಸ್ಟೇಟ್ ಅನ್ನು ಕಟ್ಟುತ್ತಿತ್ತು. ಅದರಲ್ಲಿ ಗುತ್ತಿಗೆಯ ಮೇಲೆ ಸಾಂಸ್ಕೃತಿಕ ಮತ್ತು ಆಟದ ಸಂಸ್ಥೆಗಳಿಗೆ ಜಾಗವನ್ನು ನೀಡಲಾಗುತ್ತಿತ್ತು. ಈ ಅವಕಾಶವನ್ನು ಬಳಸಿಕೊಂಡ ಅಸೋಸಿಯೇಷನ್ನ ಮಿತ್ರರು ಬಾವುದಾಜಿ ರಸ್ತೆಯಲ್ಲಿ 1000 ರೂಪಾಯಿಗೆ ಜಾಗವನ್ನು ಗುತ್ತಿಗೆಗೆ ಪಡೆದುಕೊಂಡರು. ಮುಂದೆ ಉದ್ಯಮಿ ಆರ್. ಡಿ.ಚಾರ್ ಅವರ ನೇತೃತ್ವದಲ್ಲಿ 1934 ರಲ್ಲಿ ವಾಣಿ ವಿಲಾಸ ಮೆಮೋರಿಯಲ್ ಹಾಲ್ ಕಟ್ಟಡ ನಿರ್ಮಾಣವಾಯಿತು. ಅಂದಿನ ಮುಂಬೈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕನ್ನಡಿಗ ಬಿ.ಜಿ.ಖೇರ್ ಅವರು ಮೈಸೂರ್ ಅಸೋಸಿಯೇಷನ್ ಗ್ರಂಥಾಲಯವನ್ನು ಉದ್ಘಾಟಿಸಿದರು. ಮೈಸೂರ್ ಅಸೋಸಿಯೇಷನ್ ಬೆಳ್ಳಿ ಹಬ್ಬಕ್ಕೆ ಮೈಸೂರಿನ ಮಹಾರಾಜರಾಗಿದ್ದ ಜಯ ಚಾಮ ರಾಜೇಂದ್ರ ಒಡೆಯರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಂತಾರಾಷ್ಟ್ರೀಯ ಖ್ಯಾತಿಯ ಸಿನಿಮಾಟೋಗ್ರಾಫರ್ ವಿ. ಕೆ. ಮೂರ್ತಿ ಅವರು ಅಸೋಸಿಯೇಷನ್ ನಾಟಕ ಚಟುವಟಿಕೆಗೆ ಹೊಸ ಆಯಾಮವನ್ನು ನೀಡಿದರು. ಮೈಸೂರು ಅಸೋಸಿಯೇಷನ್ ತಂಡ ಕಳೆದ ಒಂದು ಶತಮಾನದಲ್ಲಿ ಸುಮಾರು 150ರಷ್ಟು ಕನ್ನಡ ನಾಟಕಗಳನ್ನು ಆಡಿ ಹೆಸರು ಮಾಡಿದೆ. ದಿವಾನ್ ಮಿರ್ಜಾ ಇಸ್ಮಾಯಿಲ್, ತೀನಂಶ್ರೀ, ಮಾಸ್ತಿ, ಶಿವರಾಮ ಕಾರಂತ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ ಹೀಗೆ ನೂರಾರು ಮಂದಿ ಸಾಹಿತಿಗಳು ಸಾಧಕರು ಕಲಾವಿದರು ಮೈಸೂರು ಅಸೋಸಿಯೇಷನ್ಗೆ ಕಾಲಕಾಲಕ್ಕೆ ಭೇಟಿ ನೀಡಿ ಅಸೋಸಿಯೇಷನದ ಸಾಧನೆಯನ್ನು ಗುಣಗಾನ ಮಾಡಿದ್ದಾರೆ.

1937 ಮುಂಬೈಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜನೆಯಲ್ಲಿಯೂ ಅಸೋಸಿಯೇಷನ್ ಮುಖ್ಯವಾದ ಪಾತ್ರವನ್ನು ವಹಿಸಿತ್ತು. ಮೈಸೂರು ಅಸೋಸಿಯೇಷನ್ ಕ್ರೀಡೆಯಲ್ಲಿಯೂ ಮುಂಚೂಣಿಯಲ್ಲಿತ್ತು. ಬಾಸ್ಕೆಟ್ ಬಾಲ್, ಕೇರಂ, ಚೆಸ್, ಟೆನಿಸ್ ಕ್ರೀಡೆಗಳಲ್ಲಿಯು ಅಸೋಸಿಯೇಷನ್ ತಂಡ ಬಲಶಾಲಿಯಾಗಿತ್ತು .

ಇವತ್ತು ಮುಂಬಯಿ ಮಹಾನಗರದ ಹೃದಯ ಭಾಗದಲ್ಲಿ, ಕಿಂಗ್ ಸರ್ಕಲ್ ಸಮೀಪದ ಭಾವು ದಾಜಿ ರಸ್ತೆಯಲ್ಲಿ ತನ್ನದೇ ಆದ ಸ್ವಂತ ನಿವೇಶನ, ಭವ್ಯವಾದ ಕಟ್ಟಡ, ವ್ಯವಸ್ಥಿತ ರಂಗಮಂದಿರ, ಸಭಾ ಗೃಹ, ಗ್ರಂಥಾಲಯ, ಒಳಾಂಗಣ ಕ್ರೀಡಾ ಸೌಲಭ್ಯ ಮೊದಲಾದ ಆಧುನಿಕ ಪರಿಕರಗಳೊಂದಿಗೆ ಈ ಸಂಸ್ಥೆ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಈ ಸಂಸ್ಥೆಯ ಇತಿಹಾಸದ ಪುಟಗಳನ್ನು ಮಗಚುತ್ತಾ ಹೋದರೆ ಅದೊಂದು ರೋಚಕ ಅನುಭವ. ಅಲ್ಲಿ ಮೂರು ನಾಲ್ಕು ತಲೆಮಾರುಗಳ ನೋವು ನಲಿವುಗಳ ಪರಿಚಯ ನಮಗಾಗುತ್ತದೆ.

ಹೊರನಾಡಿನಲ್ಲಿ ನಾಲ್ಕು ಮಂದಿ ಸೇರಿ ಸಾಂಘಿಕ ಮನೋಭಾವದಿಂದ ದುಡಿದರೆ ಏನನ್ನೂ ಮಾಡಬಹುದು ಎಂಬುದಕ್ಕೆ ಮೈಸೂರು ಅಸೋಸಿಯೇಶನ್ ಒಂದು ಉತ್ತಮ ನಿದರ್ಶನ.

ಆಣೆ. ಪಾವಾಣೆಗೆ ಬೆಲೆಯಿದ್ದ ಸಂದರ್ಭ. ಹಾಗೆಂದು ಸದಸ್ಯರು ಕೈ ಕಟ್ಟಿ ಕುಳಿತುಕೊಳ್ಳುವಂತಿರಲಿಲ್ಲ. ಧನ ಸಂಗ್ರಹ ಯುದ್ಧ ಆರಂಭವಾಯಿತು. ದಾನಿಗಳ ಮನ ಕರಗಿತು. 1935ರಲ್ಲಿ ಇಂದಿನ ಮೈಸೂರು ಅಸೋಸಿಯೇಶನ್ ಕಟ್ಟಡಕ್ಕೆ ಕೆಸರ್ಗಲ್ಲು ಹಾಕಲಾಯಿತು. ವಾಣಿ ವಿಲಾಸ ಮೆಮೋರಿಯಲ್ ಹಾಲ್ ನಿರ್ಮಾಣವಾಯಿತು. ಕ್ರಮೇಣ ಸಂಸ್ಥೆಯ ಜನಬಲ ಧನಬಲ ಹೆಚ್ಚಿತು. 1940-41ರಲ್ಲಿ ಈ ಕಟ್ಟಡದ ಮೊದಲ ಮಹಡಿ ಸಿದ್ಧವಾಯಿತು. 90ರ ದಶಕ ಮೈಸೂರು ಅಸೋಸಿಯೇಷನ್‌ನ ಇತಿಹಾಸದಲ್ಲಿ ಒಂದು ಪರ್ವಕಾಲ. ಇಂದಿನ ಬಹುಮಹಡಿಯ ಭವ್ಯ ಕಟ್ಟಡ ತಲೆಯೆತ್ತಿ ನಿಂತದ್ದು ಈ ಹಂತದಲ್ಲೇ. ಸಂಪೂರ್ಣ ವಾತಾನುಕೂಲಿತ 300 ಆಸನಗಳುಳ್ಳ ಅಚ್ಚುಕಟ್ಟಾದ ಸಭಾಗೃಹ ಮುಂಬಯಿ ಕನ್ನಡಿಗರ ಹೆಮ್ಮೆಯ ಪ್ರತೀಕ.

ಮೈಸೂರು ಅಸೋಸಿಯೇಷನ್ ಸಂಗೀತ, ನಾಟಕ, ಕ್ರೀಡೆ, ಸಾಹಿತ್ಯ, ಧಾರ್ಮಿಕ, ಲಲಿತ ಕಲೆ, ಶಿಕ್ಷಣ ಹೀಗೆ ಹತ್ತಾರು ಕ್ಷೇತ್ರಗಳಿಗೆ ಗಣನೀಯವಾದ ಕೊಡುಗೆಯನ್ನು ನೀಡಿದೆ. ಕನ್ನಡ ಶಿಕ್ಷಣಕ್ಕೆ ಬೇಕಾದಷ್ಟು ಸವಲತ್ತನ್ನು ನೀಡಿದೆ; ನೀಡುತ್ತಿದೆ. ಎನ್.ಕೆ.ಇ.ಎಸ್. ಶಾಲೆ, ಮಹಾವಿದ್ಯಾಲಯ, ವೃತ್ತಿಪರ ಕಾಲೇಜುಗಳ ಅಭಿವೃದ್ಧಿಯಲ್ಲಿ ಈ ಸಂಘದ್ದು ಸಿಂಹ ಪಾಲಿದೆ. ಕಾಲಕಾಲಕ್ಕೆ ಬಗೆ ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅದು ನಡೆಸಿಕೊಂಡು ಬರುತ್ತಿದೆ. ಸಂಸ್ಥೆಯ ಬಂಗಾರ ಹಬ್ಬದ ನೆನಪಿಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ದತ್ತಿ ನಿಧಿಯೊಂದನ್ನು ಸ್ಥಾಪಿಸಿ ಕನ್ನಡ ವಿಭಾಗದ ಮೂಲಕ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಮುಂಬಯಿ ಕನ್ನಡಿಗರಿಗೆ ಅದು ಉಣ ಬಡಿಸಿದೆ. ಈ ಮಾಲಿಕೆಯಲ್ಲಿ ಈಗಾಗಲೇ ಶಿವರಾಮ ಕಾರಂತ, ಕೀರ್ತಿನಾಥ ಕುರ್ತಕೋಟಿ, ಚಂದ್ರಶೇಖರ ಕಂಬಾರ, ಯು. ಆರ್. ಅನಂತ ಮೂರ್ತಿ, ಡಾ. ಎಂ. ಎಂ. ಕಲಬುರ್ಗಿ, ಸೂರ್ಯನಾಥ ಕಾಮತ್, ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಹಾ.ಮಾ.ನಾ. ಮೊದಲಾದವರು ತಮ್ಮ ವಿದ್ವತ್‌ಪೂರ್ಣ ಪ್ರಬಂಧಗಳನ್ನು, ಉಪನ್ಯಾಸಗಳನ್ನು ಮಂಡಿಸಿದ್ದಾರೆ. ಇದಲ್ಲದೆ ಕನ್ನಡ ಮರಾಠಿ ಸಂಬಂಧವನ್ನು ಬಲಗೊಳಿಸುವ ಅನೇಕ ಕೆಲಸಗಳನ್ನು ಇದು ಮಾಡಿದೆ. ಕನ್ನಡ ಮರಾಠಿ ಕಲಾತ್ಮಕ ಸಿನಿಮಾಗಳ ಪ್ರದರ್ಶನ, ಕನ್ನಡ ಮರಾಠಿ ಸಂತ ಸಾಹಿತ್ಯ, ಸಂಗೀತ ಕಾರ್ಯಕ್ರಮಗಳನ್ನು ನಡೆಸಿ ಈ ಎರಡು ಸಂಸ್ಕೃತಿಗಳನ್ನು ಮತ್ತಷ್ಟು ಹತ್ತಿರ ತಂದಿದೆ. ಹೊರನಾಡು ಒಳನಾಡು ಎಂಬ ಭೇದವಿಲ್ಲದೆ ಪ್ರತಿಭಾವಂತ ಯುವ ಕಲಾವಿದರನ್ನು ಗುರುತಿಸಿ ಬೆಳಕಿಗೆ ತರುವ ಕೆಲಸವನ್ನು ಅಸೋಸಿಯೇಷನ್ ಸದ್ದಿಲ್ಲದೇ ನಡೆಸಿಕೊಂಡು ಬರುತ್ತಿದೆ.

1960 ರಿಂದ ಮುಂಬೈಯಲ್ಲಿ ಕನ್ನಡ ಚಲನಚಿತ್ರಗಳ ಉತ್ಸವವನ್ನು ಅಸೋಸಿಯೇಷನ್ ಮೂವತ್ತು ವರ್ಷಗಳ ಕಾಲ ನಡೆಸಿಕೊಂಡು ಬಂದದ್ದು ದೊಡ್ಡ ಸಾಧನೆ.

ಅಸೋಸಿಯೇಷನ್ ಕಲೆ, ನಾಟಕ, ಸಂಗೀತ, ರಂಗಭೂಮಿ ಮೊದಲಾದ ಚಟುವಟಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಕನ್ನಡವಲ್ಲದೇ, ಮರಾಠಿ, ಗುಜರಾತಿ, ಇಂಗ್ಲೀಷ್ ನಾಟಕಗಳಿಗೂ ಇಲ್ಲಿ ಅವಕಾಶ ಮಾಡಿಕೊಟ್ಟಿದೆ. ಬಹು ಭಾಷಾ ನಾಟಕೋತ್ಸವೊಂದನ್ನು 1986 ರಲ್ಲಿ ಮೊದಲು ಮಾಡಿದ್ದು ಇಂದಿನವರೆಗೂ ಅದು, ಶ್ರೀರಂಗರ ನೆನಪಿನಲ್ಲಿ ನಡೆಯುತ್ತಿದೆ. ಹೆಸರಾಂತ ನಾಟಕರಾದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಜಬ್ಬಾರ್ ಪಟೇಲ್, ಸತ್ಯದೇವ ದುಬೆ, ಎಂ. ಎಸ್. ಸತ್ಯು, ನಾದಿರಾ ಬಬ್ಬರ್, ರಮೇಶ್ ತಲ್ವಾರ್, ರಾಮಚಂದ್ರನ್ ಅವರು ಈ ವೇದಿಕೆಯ ಮೇಲೆ ತಮ್ಮ ನಾಟಕಗಳನ್ನು ಆಡಿದ್ದಲ್ಲದೆ. ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಾರೆ. "ಕರ್ನಾಟಕೋತ್ಸವ"ದ ಹೆಸರಿನಲ್ಲಿ ಅಸೋಸಿಯೇಷನ್ ವೈವಿಧ್ಯಮಯವಾಗಿ 5 ದಿನಗಳ ಕಾರ್ಯಕ್ರಮವನ್ನು ಮೂರು ಬಾರಿ ಹಮ್ಮಿಕೊಂಡಿದೆ. ಈ ಉತ್ಸವದಲ್ಲಿ ಕರ್ನಾಟಕದ ಅಡಿಗೆಗಳು, ಪ್ರವಾಸಕ್ಷೇತ್ರಗಳು, ಸಾಹಿತ್ಯ-ಸಾಹಿತಿ. ಕವನ ಗಾಯನ, ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ, ನಾಟಕಗಳ ಪ್ರದರ್ಶನ. ಹಾಗು ಕರ್ನಾಟಕದ ಕರ ಕುಶಲ ಕೈಗಾರಿಕೆಗಳು ಎಲ್ಲವನ್ನೂ ಒಂದು ಹಬ್ಬದ ಮಾದರಿಯಲ್ಲಿ ಆಚರಿಸಿದೆ.

ಅನೇಕ ವಿದ್ವಾಂಸರು ಸಂಗೀತ ಕಲಾವಿದರು ಅಸೋಸಿಯೇಷನ್ನಿನಲ್ಲಿ ತಮ್ಮ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ವಿದ್ವಾನ್ ಆರ್. ಕೆ. ಶ್ರೀಕಂಠನ್, ಆರ್.ಕೆ. ಪದ್ಮನಾಭ್, ಸುಕನ್ಯಾ ಪ್ರಭಾಕರ್, ಡಾ.ಟಿ.ಎಸ್.ಸತ್ಯವತಿ, ಎಂ. ಎಸ್. ಶೀಲಾ, ವಿದ್ವಾನ್ ವೀಣೆ ಶಂಕರನಾರಾಯಣ ರಾವ್ ಇವರಲ್ಲಿ ಮುಖ್ಯರಾದವರು.

ಕಳೆದ ಅನೇಕ ವರ್ಷಗಳಿಂದ ಅಸೋಶಿಯೇಷನ್, ಜಾಗತಿಕ ಕವನ ಸ್ಪರ್ಧೆ, ಜಾಗತಿಕ ಸಣ್ಣ ಕಥಾ ಸ್ಪರ್ಧೆ, ಕನ್ನಡ ಏಕಾಂಕ ನಾಟಕ ಸ್ಪರ್ಧೆಗಳನ್ನು ಮೊದಲು ಮಾಡಿ, ಹೊಸ ಹೊಸ ಬರಹಗಾರರಿಗೆ ಸ್ಫೂರ್ತಿಯನ್ನು ನೀಡಿದೆ.ಮುಂಬೈಯಲ್ಲಿ ಅಸೋಸಿಯೇಷನ್ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಉಳಿವಿಗಾಗಿ ಎಂದೂ ಟೊಂಕ ಕಟ್ಟಿ ನಿಂತಿದೆ.

ಮೈಸೂರು ಅಸೋಸಿಯೇಷನ್ ಕಳೆದ 99 ವರ್ಷಗಳಿಂದ, ಮುಂಬೈಯಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಾ ಬಂದಿದೆ .

2006 ರಲ್ಲಿ ಸುವರ್ಣ ಕರ್ನಾಟಕದ ಸಮಯದಲ್ಲಿ ಕರ್ನಾಟಕ ಸರಕಾರದ ಕನ್ನಡ -ಸಂಸ್ಕೃತಿ ಇಲಾಖೆಯೊಡನೆ ಸೇರಿಕೊಂಡು ದೊಡ್ಡ ಪ್ರಮಾಣದಲ್ಲಿ 3 ದಿನಗಳ ನಡೆದ ಸಾಂಸ್ಕೃತಿಕ ಸಮ್ಮೇಳನದ ಮುಂದಾಳತ್ವವನ್ನು ವಹಿಸಿತ್ತು.

1952, 1976,1986, 2001 ರಲ್ಲಿ ಅಸೋಸಿಯೇಷನ್ ತನ್ನ ಬೆಳ್ಳಿ, ಬಂಗಾರ, ವಜ್ರ ಹಾಗೂ ಅಮೃತ ಹಬ್ಬಗಳನ್ನು ಅದ್ದೂರಿಯಿಂದ ಆಚರಿಸಿದೆ. ಕನ್ನಡ ಸಾಹಿತ್ಯದ ಬಲವರ್ಧನೆಗೂ ಮೈಸೂರು ಅಸೋಸಿಯೇಷನ್ ವಿಶೇಷವಾದ ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ.

ಅಸೋಸಿಯೇಷನ್ ತನ್ನ ಚಟುವಟಿಕೆಯನ್ನು ತಿಳಿಸಲು, ಸದಸ್ಯರ ವಾಚನಾಭಿರುಚಿಯನ್ನು ಹೆಚ್ಚಿಸಲು ಮೈಸೂರು ಅಸೋಸಿಯೇಷನ್ ಕಳೆದ ನಾಲ್ಕು ದಶಕಗಳಿಂದ 'ನೇಸರು' ಎಂಬ ತಿಂಗಳೋಲೆಯನ್ನು ಪ್ರಕಟಿಸುತ್ತಿದೆ. ಸಾಹಿತ್ಯಕವಾಗಿ ಮೌಲಿಕವಾದ ಬರಹಗಳು ಇಲ್ಲಿ ಬೆಳಕು ಕಂಡಿವೆ ಎಂಬುದು ಗಮನಾರ್ಹ ಸಂಗತಿ. ಅನೇಕ ಯುವ ಲೇಖಕರನ್ನು ಲೋಕ ಮುಖಕ್ಕೆ ಪರಿಚಯಿಸಿದ್ದು ಈ ಪತ್ರಿಕೆಯ ಇನ್ನೊಂದು ಸಾಧನೆ.

ಮುಂಬಯಿಯಲ್ಲಿ ಕನ್ನಡ ರಂಗಭೂಮಿಯನ್ನು ಜೀವಂತವಾಗಿಡುವಲ್ಲಿ ಮೈಸೂರು ಅಸೋಸಿಯೇಷನ್ ಮಿತ್ರರು ನಿರಂತರವಾಗಿ ಶ್ರಮಿಸುತ್ತಾ ಬಂದಿದ್ದಾರೆ. ಈ ಸಂಸ್ಥೆಯ ರಂಗಭೂಮಿ ಚಟುವಟಿಕೆಗಳಿಗೆ ಒಂಬತ್ತು ದಶಕಗಳ ಸುದೀರ್ಘವಾದ ಇತಿಹಾಸವಿದೆ. ಕಟ್ಟಡ ನಿರ್ಮಾಣಕ್ಕೆ ಧನ ಸಂಗ್ರಹ ಮಾಡಲು ಅನೇಕ ನಾಟಕಗಳನ್ನು ಪ್ರದರ್ಶಿಸಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಕನ್ನಡದ ಹಿರಿಯ ನಾಟಕಕಾರರಾದ ಟಿ.ಪಿ.ಕೈಲಾಸಂ, ಆರ್. ನಾಗೇಂದ್ರರಾವ್ ಮೊದಲಾದ ಹಿರಿಯರ ಮಾರ್ಗದರ್ಶನ, ಆಶೀರ್ವಾದವೂ ಈ ಸಂಸ್ಥೆಗೆ ದೊರಕಿದೆ ಎಂಬುದು ಉಲ್ಲೇಖನೀಯ ಅಂಶ. ನಾಟಕವೆಂದರೆ ಮೂಗುಮುರಿಯುತ್ತಿದ್ದ, ಅದು ಹೆಣ್ಣು ಮಕ್ಕಳಿಗೆ ಹೇಳಿಸಿದ್ದಲ್ಲ ಎಂಬ ಅಭಿಪ್ರಾಯವಿದ್ದ ಕಾಲದಲ್ಲಿ ಈ ಸಂಘದ ಕಲಾವಿದೆಯರು ನಾಟಕಗಳಲ್ಲಿ ಭಾಗವಹಿಸಿ ಸೈ ಸೈ ಎನಿಸಿಕೊಂಡರಂತೆ. ಮಧುರಾ ಕೃಷ್ಣಸ್ವಾಮಿ, ಶಾರದಮ್ಮ ನಾರಾಯಣ ಸ್ವಾಮಿ, ಕುಂತಿ ದುಗ್ಗಪ್ಪಯ್ಯ, ಸೀತಮ್ಮಾ ರಾವ್, ಉಷಾ ಜೈರಾಮ್, ರಮಾ ಹರಿಹರನ್, ಎಂ.ಆರ್.ಕೆ. ಮೂರ್ತಿ, ನಾರಾಯಣ ಸ್ವಾಮಿ, ಡಾ. ಮಂಜುನಾಥ, ಕೆ. ಮಂಜುನಾಥಯ್ಯ ಮೊದಲಾದವರ ಸಾಧನೆ ಸಣ್ಣ ಪ್ರಮಾಣದ್ದೇನಲ್ಲ. ಒಂದು ಕಾಲದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ಆರಂಭಿಸಿದ ಈ ಸಂಸ್ಥೆ ಇಂದು ಇತಿಹಾಸ ನಿರ್ಮಾಣ ಮಾಡಿದೆ.

ಮೈಸೂರು ಅಸೋಸಿಯೇಷನ್ ಇಂದು ಎಲ್ಲ ಕನ್ನಡಿಗರಿಗೂ ಸದಸ್ಯತ್ವದ ಅವಕಾಶ ಕಲ್ಪಿಸಿದೆ. ಒಂದು ಮನೆಯ ವಾತಾವರಣವನ್ನು ಈ ಸಂಸ್ಥೆ ಇಂದಿಗೂ ಉಳಿಸಿಕೊಂಡು ಬಂದಿದೆ. ಕೂಡಿ ದುಡಿದು ಹಂಚಿ ತಿನ್ನುವ, ಸಹಕಾರ ಪದ್ಧತಿಗೆ ಒಂದು ಮೇಲ್ಪಂಕ್ತಿಯನ್ನು ಇಲ್ಲಿನ ಸದಸ್ಯರು ಹಾಕಿಕೊಟ್ಟಿದ್ದಾರೆ. ಶಿಸ್ತು, ಅಚ್ಚುಕಟ್ಟುತನ, ಸಮಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಕಾರ್ಯನಿರತರಾಗಿರುವ, ಈಗ ಶತಮಾನದ ಹೊಸ್ತಿಲಲ್ಲಿ ಇರುವ ಮೈಸೂರು ಅಸೋಸಿಯೇಷನ್‌ನ ಎಲ್ಲ ಸದಸ್ಯರನ್ನು ನಾವಿಲ್ಲಿ ಅಭಿನಂದಿಸಲೇ ಬೇಕು.

# ನೀನ್ಯಾರಿಗಾದೆಯೋ ಎಲೆ ಮಾನವ

✍ **ವನಜಾ ರಾಜನ್**

ಶತ ಶತಮಾನಗಳಿಂದ ಕಾಣದ ಕೈಗಳು ರೂಪಿಸಿರುವ ಪ್ರಾಕೃತಿಕ ಪವಾಡಗಳು ಅಗಣಿತ! ಜೀವ - ಜೀವಿಗಳ ಕೊಂಡಿಗಳು ಒಂದಕ್ಕೊಂದು ಬೆಸೆದುಕೊಂಡು, ವೈಭವೋಪೇತ ಕಲಾಕೃತಿಗಳಂತೆ ಪ್ರಕೃತಿಯಲ್ಲಿ ಅನೇಕಾನೇಕ ಅದ್ಭುತಗಳ ಸೃಷ್ಟಿಯಾಗಿದೆ. ಹವಳದ ಬಂಡೆಗಳ ಮಹಾ ಪರ್ವತ ಶ್ರೇಣಿ (ದಿ ಗ್ರೇಟ್ ಬ್ಯಾರಿಯರ್ ರೀಫ್) ಪ್ರಾಕೃತಿಕ ಅದ್ಭುತಗಳಲ್ಲೊಂದು.




'ಹವಳ' ಎಂದೊಡನೆ ಅದರ ಆಕರ್ಷಕ ಬಣ್ಣ ಹಾಗೂ ಅದರಿಂದ ತಯಾರಾದ ಹೆಂಗಳೆಯರು ಧರಿಸುವ ಆಭರಣಗಳ ನೆನಪು ಮಾಡುವುದು ಸಹಜ. ಆದರೆ ಹವಳ ಎನ್ನುವುದೇನು? ಎಂಬುದರ ಬಗ್ಗೆ ನಿಜಕ್ಕೂ ಎಲ್ಲರೂ ತಿಳಿದುಕೊಳ್ಳಲೇಬೇಕಾಗಿದೆ. ಆಸ್ಟ್ರೇಲಿಯಾ ಭೂಖಂಡದ ಈಶಾನ್ಯ ಭಾಗದಲ್ಲಿ ಬೆಳೆದಿರುವ ದಿ ಗ್ರೇಟ್ ಬ್ಯಾರಿಯರ್ ರೀಫ್ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಹವಳ ದಿಬ್ಬಗಳ ಶ್ರೇಣಿ. ಕಡಲ ತೀರದ ಅಂಚಿಗೆ ಸಮಾನಾಂತರವಾಗಿ ಈ ಹವಳ ದಿಣ್ಣೆಗಳು ಬೆಳೆದಾಗ ಹವಳ ದಿಬ್ಬ (ಬ್ಯಾರಿಯರ್ ರೀಫ್) ರಚನೆಯಾಗುತ್ತದೆ. ರತ್ನಗರ್ಭ ಎಂದೆಣಿಸಿಕೊಂಡಿರುವ ಕಡಲತೀರದಲ್ಲಿ ಈ ಬಗೆಯ ಬ್ಯಾರಿಯರ್ ರೀಫನ್ನು ನಿರ್ಮಿಸಿರುವುದು 'ಕೋರಲ್ ಪಾಲಿಪ್' ಎಂಬ ಪುರಾಣಿ ಜೀವಿಗಳು ಎಂದಂದಾಗ ನಮ್ಮನ್ನು ಚಕಿತಗೊಳಿಸುತ್ತದೆ. ಇದು ಒಂದು ಮಾಂಸಹಾರಿ ಪ್ರಾಣಿ, ಆಶ್ಚರ್ಯವೆಂದರೆ, ಅದರ ಬಾಯಿಸುತ್ತಲೂ ಮುಳ್ಳುಗಳಿಂದ (ಕುಟುಕುವ) ಸ್ಪರ್ಶಾಂಗಗಳು ಇವೆ (tentacles), ಅವುಗಳ ಮುಖ್ಯ ಆಹಾರ ಪಾಚಿ, ಅಣೆಬೆಯೂ ಕೂಡಿದ ಕಲ್ಲುಹೂವು ಇತ್ಯಾದಿ. ಎಲ್ಲಕ್ಕಿಂತ ಮುಖ್ಯವಾಗಿ ಹವಳ ಉಳಿಯಬೇಕಾದರೆ ಸೂರ್ಯನ ಬೆಳಕು ಅತಿ ಮುಖ್ಯ. ಅತಿ ಚಿಕ್ಕದಾಗಿರುವಾಗ, 'ಜೆಲ್ಲಿ ಮೀನಿನಂತೆ' ತೇಲಿಕೊಂಡು, ಗಟ್ಟಿಯಾಗಿರುವ ಸ್ಥಳಕ್ಕೆ ಅಂಟಿಕೊಂಡು ತದನಂತರ, ತನ್ನ ಸುತ್ತಲೂ ಸುಣ್ಣದ ಗಡುಸಾದ ಹೊರ ಕವಚ (Shell) ಕಟ್ಟಿಕೊಳ್ಳುತ್ತದೆ. ಈ ಪುಟ್ಟ ಪಾಲಿಪ್ ಗಳು ಮತ್ತಿತರ ಸಮುದ್ರಜೀವಿಗಳೊಡನೆ ವಸಾಹತುಗಳಲ್ಲಿ ಜೀವಿಸಿ, ಕಾಲಾಂತರದಲ್ಲಿ ಅವುಗಳ ಅಸ್ಥಿಪಂಜರಗಳು ಒಂದಕ್ಕೊಂದು ಬೆಸೆದುಕೊಂಡು ಸುಣ್ಣದ ಬಂಡೆಗಳಾಗಿ ಚಿತ್ರ ವಿಚಿತ್ರ ಆಕೃತಿಯಲ್ಲಿ ಬೆಳೆಯುತ್ತವೆ. ವಿಶ್ವದಲ್ಲಿಯೇ ಜೀವ ನಿರ್ಮಿತ ಏಕಮಾತ್ರ ವಿಶಿಷ್ಟ ರಚನೆಯೆಂದು ಪ್ರಖ್ಯಾತಿಗೊಂಡಿದೆ. ಇದರ ವಿಶೇಷತೆಯನ್ನು ಬಣ್ಣಿಸಲು ಪದಗಳನ್ನು ಹುಡುಕಬೇಕಾಗಿದೆ! ಇದರ ಉದ್ದ ಸುಮಾರು 2600 ಕಿಲೋಮೀಟರ್ (1600 ಮೈಲುಗಳು) ಇದರಲ್ಲಿ 900 ಚಿಕ್ಕ ಚಿಕ್ಕ ದ್ವೀಪಗಳು ಸೇರಿವೆ. ಅಷ್ಟೇ ಏನು? ಈ ವಸಾಹತು ಜೀವಿಗಳು ರಚಿಸಿರುವ ಬೃಹತ್ ದಿಬ್ಬಗಳ ನಡುವೆ ಅಗಾಧ ಪ್ರಮಾಣದಲ್ಲಿ ಅಪರೂಪದ ಸಮುದ್ರ ಜೀವಿಗಳಾದ ತಿಮಿಂಗಲಗಳು, ಡಾಲ್ಫಿನ್ ಗಳು, ಕುಬ್ಜ ಮಿಂಕ್ ತಿಮಿಂಗಲಗಳು ಗೂನು ಬೆನ್ನಿನ ಡಾಲ್ಫಿನ್ ಗಳು ಡುಗೊಂಗ್ ಗಳು ವಾಸವಾಗಿವೆ. 150 ಕ್ಕೂ ಹೆಚ್ಚು ಜಾತಿಯ ಮೀನುಗಳು, ಅಪರೂಪದ ಕ್ಲೌನ್ ಫಿಶ್ , ರೆಡ್ ಬಾಸ್ ಮುಂತಾದ ಚಿಕ್ಕ ಚಿಕ್ಕ ಮೀನುಗಳು ವಾಸವಾಗಿವೆ. ಹಲವಾರು ಕಡಲಾಮೆಗಳ ಅಗಾಧವಾದ ವಸತಿಗಳು ಸಹ ಇಲ್ಲಿವೆ.

ಪ್ರಕೃತಿ ಮಾತೆ ನಮಗೆ ನೀಡಿರುವ ಈ ನಿಧಿ ಬೆಲೆ ಕಟ್ಟಲಾಗದ ಈ ಸಂಪತ್ತನ್ನು ಉಳಿಸಿಕೊಳ್ಳಬೇಕಾದ ಗುರುತರ ಜವಾಬ್ದಾರಿ ಈಗಲೀಗ ನಮ್ಮೆಲ್ಲರ ಹೆಗಲ ಮೇಲಿದೆ. ಈಗಾಗಲೇ ಈ ಸಂಪತ್ತಿನ ಶೇಕಡ 60 ಭಾಗ ನಾಶವಾಗಿದೆ ಹಾಗೂ ಇನ್ನು ಮೂವತ್ತು ವರ್ಷಗಳಲ್ಲಿ ಈ ಪ್ರಕೃತಿಯ ಅದ್ಭುತವೂ ಪೂರ ಅಳಿದು ಹೋಗಬಹುದೆಂದು ವಿಶ್ವಸಂಸ್ಥೆ ಅಪಾಯದ ಗಂಟೆ ಹೊಡೆದಿದೆ! ಪುರಾಣಿ ಜೀವಿಗಳು ಲಕ್ಷಾಂತರ ವರ್ಷಗಳಲ್ಲಿ ನಿರ್ಮಿಸಿರುವ 'ಗ್ರೇಟ್ ಬ್ಯಾರಿಯರ್ ರೀಫ್' ಮಾನವನ ಇತ್ತೀಚಿನ ಕೆಲವೇ ದಶಕಗಳ ಅತಿರೇಕದಿಂದ ಅಳಿವಿನ ಅಂಚನ್ನು ಮುಟ್ಟಿರುವುದು ಒಂದು ವಿಪರ್ಯಾಸವೇ ಸರಿ!

ಪ್ರಾಕೃತಿಕ ಸಂಪನ್ಮೂಲಗಳನ್ನು ಲೂಟಿ ಮಾಡುವುದೇ ಕಾಯಕವನ್ನಾಗಿ ಕೈಗೊಂಡಿರುವ ಮನುಷ್ಯ, ಭಸ್ಮಾಸುರನಂತೆ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಿರುವುದು. ಅವನ ಅರಿವಿಗೆ ಇದುವರೆಗೆ ಬಂದಂತಿಲ್ಲ. ಭೂಮಿಯನ್ನು ಕೆತ್ತಿ, ಬಗೆದು, ಬರಿದು ಮಾಡಿ ಬಂಜೆಯಾಗಿಸುವುದುದೇ ಅಲ್ಲದೆ ಕಾಡುಗಳನ್ನು ಕಡಿದು, ಹಸಿರನ್ನು ತೊಡೆಸಿ ಹಾಕಿ ಉಸಿರಾಡಲೂ ಕೂಡ ಸಾಧ್ಯವಾಗದಂತೆ, ಮಾಡಿರುವ ಮಾನವ ಮುಂದಿನ ಪೀಳಿಗೆಗೆ ಏನು ತಾನೇ ಉಳಿಸಬಲ್ಲನು? ಧರೆ ಹತ್ತಿ ಉರಿಯುತ್ತಿದೆ. ಬಿಸಿಯ ಝುಳ ಅವನಿಗೆ ಇನ್ನೂ ಮುಟ್ಟಿಲ್ಲವೇ?

**ಪುಟ 16 ಕ್ಕೆ......**

# ನಮ್ಮ ವಾರಾಣಸಿ – ಅಯೋಧ್ಯಾ ಪಯಣ

*(ಕಳೆದ ಸಂಚಿಕೆಯಿಂದ...)*




ಆಯ್ತು ನಮ್ಮ ವಾರಣಾಸಿ ಪಯಣ ಶಿವನ ಸಾನಿಧ್ಯದಲ್ಲಿ ಮೂರು ದಿನ ಕಳೆದು, ಬೆಳಿಗ್ಗೆ 7.00ಕ್ಕೆ ನಾವು ಬಸ್ ಹತ್ತಿದೆವು. ಗೊತ್ತಲ್ಲಾ, ಈ ಶ್ಯಾಮಲಿ ಮತ್ತು ಪದ್ಮ ಬಳಗ ಹಿಂದಿನ ಸೀಟುಗಳಲ್ಲಿ, ನಾವು ಮುಂದಿನ ಸೀಟುಗಳಲ್ಲಿ.. ಆದರೆ ಈ ಜೋಶಿಯವರನ್ನ ನೆಚ್ಚಿಕೆ ಮಾಡುವಂತೆಯೇ ಇಲ್ಲ. ನಡುವಿನ ಸೀಟಿನಲ್ಲಿ ಕೂತು, ಎರಡೂ ಕಡೆ ವಾಲಾಡುತ್ತಾ ನಡೆಯುತ್ತಾರೆ. ಈ ಕಡೆಗೂ ಸರಿ, ಆ ಕಡೆಗೂ ಸರಿ ಇರಲಿ.

ಇನ್ನು ದಾರಿಯುದ್ದಕ್ಕೂ ಈ ಶ್ಯಾಮಲಿ ಅಂತಾಕ್ಷರಿ ಅಂತ ಶುರು ಮಾಡಿದಳು. ಯಾವ ಭಾಷೆಯ ಹಾಡಾದರೂ ಇರಬಹುದು ಆದರೆ ಕಡೆಯ ಶಬ್ಧದಿಂದಲೇ ಮೊದಲು ಮಾಡಬೇಕಂತ ಕರಾರು. ಆಯ್ತು. ಮೊದಲು ಮಾಡಿದಾಗ ಹಿಂದಿನವರು ಮುಂದಿನವರು ಅಂತ ಭಾಗವಾಯಿತು. ಹಿಂದಿ, ಕನ್ನಡ, ಎಲ್ಲಾ ಆಯಿತು. ಆಮೇಲೆ ಬೇಕೆಂದೇ ಕಡೆಯ ಶಬ್ಧ 'ಕ್ಷ', ಇಲ್ಲ 'ಥ' ಕೊಡಲು ಮೊದಲು ಮಾಡಿದರು. ಆದರೇನು ಈ ಮಹಾರಾಯ ಡಾಕ್ಟರು, ತನ್ನದೇ




ಕಾವ್ಯ ಕಟ್ಟಿ ಹಾಡಿದಾಗ, ಅವರು ತಬ್ಬಿಬ್ಬಾದರು. ಸಮಾಧಾನ ಮಾಡ್ತೀನಿ ಅಂತ ಜೋಶಿ ಸಾಹೇಬರು ಎಲ್ಲರಿಗೂ, ಕಾರ ಸೇವೆ, ಕಲ್ಲು ಸಕ್ಕರೆ ಕೊಟ್ಟಾಗ ಎಲ್ಲರ ಹುಮ್ಮಸ್ಸು ಇನ್ನೂ ಹೆಚ್ಚಿ, ಈ ಥಯ್ಯ ಮಾಮ "ಸಾಕು ನಿಮ್ಮ ಅಂತಾಕ್ಷರೀ ಇನ್ನು ಅಂತ್ಯ ಮಾಡಿ" ಅಂದಾಗ ನಿಂತಿತು.

ಅಷ್ಟು ಹೊತ್ತಿಗೆ ಚಿತ್ರಕೂಟ ಕಾಣಿಸ್ತಾ ಇದೆ. ಆದರೆ ಮುಂದಕ್ಕೆ ಹೋಗುವಂತಿಲ್ಲ. ಟ್ರಾಫಿಕ್. ಎಲ್ಲರೂ ಬೇರೆ ಬೇರೆ ಆಟೋದಲ್ಲಿ ಕೂತು ಹೋಗಬೇಕು ಎಂದಾಯ್ತು. ಸರಿ, ಈ ಅಜಯ್ ಹಾಗೂ ಅಜಿಂಕ್ಯ ಮಾಡಿಕೊಟ್ಟ ಆಟೋದಲ್ಲಿ ಕೂತೆವು. ಆದರೆ ತುಸು ಮುಂದೆ ಹೋಗಿ ಇನ್ನೂ ದೊಡ್ಡ ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿ ಬಿದ್ದೆವು. ಎದುರಿಗೆ ಒಂದು ದೊಡ್ಡ ಬಸ್, ಈ ಬಲಪಕ್ಕದಿಂದ ಬರುವ ರಸ್ತೆಯಲ್ಲಿ ಆಟೋಗಳ ಹಾರಾಟ. ಈ ಕಡೆಯಿಂದ ಆ ಕಡೆಗೆ ಹೋಗಬೇಕು ಅಂತ ನುಗ್ಗುವ ಆಟೋಗಳು, ಮೋಟಾರ ಸೈಕಲ್ ಗಳು. ಅದರೆ ಆ ಆಟೋ ನಡೆಸುವವರ ಚಾತುರ್ಯವೇ ಚಾತುರ್ಯ. ಎಲ್ಲದರಲ್ಲೂ ತೂರಿಕೊಂಡು ನಮ್ಮನ್ನು ಒಂದು ಹನುಮಂತನ ಗುಡಿಗೆ



ಕರೆದುಕೊಂಡು ಬಂದರು. ನೀರಿನ ನಡುವೆ ಇದ್ದ ದ್ವೀಪದಲ್ಲಿ ಆ ಹನುಮಂತನ ಗುಡಿ. ತುಂಬಾ ಸುಂದರವಾದ ಜಾಗ, ಅಲ್ಲಿಂದ ಕೆಳಗೆ ಹೋಗಬೇಕು ಅಂತ ಈ ಗಣಪತಿ ಗಲಾಟೆ, ಬೇಡಪ್ಪಾ ಅಂತ ನವಿಲೇಕರ್. ಹಾಗೂ ಹೀಗೂ ಮಾಡಿ ಮತ್ತೆ ಬಂದು ಆಟೋ ಹತ್ತಿದೆವು. ಅಲ್ಲಿಂದ ಅವರು ಎಲ್ಲೆಡೆಗಳಲ್ಲೂ ಓಲಾಡಿಕೊಂಡು ಬಸ್ ಬಳಿ ಬಂದಿದ್ದಾಯ್ತು. ಈಗಲೇ ಊಟ ಮಾಡ್ತೀರೋ ಆಮೇಲೆ ಮಾಡ್ತೀರೋ ಅಂತ ಗಣಪತಿ. ಏಕೆಂದರೆ ಗಣಪತಿಗೆ ತಿಂಡಿ ಅಂದರೆ ಆತುರ. ಈ ಪದ್ಮಾ, "ಬೇಡಪ್ಪ,






ಬಸ್ ನಲ್ಲಿ, ಆಮೇಲೆ ಮಾಡೋಣ' ಅಂದಾಗ ಗಣಪತಿ ಮುಸುಡಿ ನೋಡಬೇಕು!!!

ಅಲ್ಲಿಂದ ಮತ್ತೆ ಬಸ್ ನಲ್ಲಿ ಓಲಾಡಿಲೊಂಡು ಚಿತ್ರಕೂಟದ ರೋಪ್ ವೇ ಗೆ ಬಂದೆವು. ನಿಜವಾಗಲೂ ಈ ರೋಪ್ ವೇ ಕೇವಲ ಚೆನ್ನಾಗಿರುವುದಲ್ಲದೇ, ಚೆನ್ನಾಗಿಯೂ ವ್ಯವಸ್ಥೆ ಮಾಡಿದ್ದಾರೆ. ನಮ್ಮನ್ನೆಲ್ಲಾ ಒಟ್ಟಾಗಿ, ಮೂರು ಡಬ್ಬಿಯಲ್ಲಿ ಕೂರಿಸಿ, ಮೇಲೆ ಕಳಿಸಿದರು. ಸುತ್ತಲೂ ಬೆಟ್ಟ ಗುಡ್ಡಗಳು, ಹರಿಯುವ ಚಿಕ್ಕ ಹೊಳೆಗಳು, ಎಲ್ಲವೂ ನಮ್ಮ ಮನ ಸೆಳೆದವು. ಮೇಲೆ ಹೋಗಿ ಇಳಿದಾಗ ಅಲ್ಲೊಂದು ಗುಡಿ. ಅದರಲ್ಲಿ ಸೀತೆ, ರಾಮ, ಲಕ್ಷ್ಮಣ ಹಾಗೂ ಹನುಮಂತ ಎಲ್ಲರೂ ಇದ್ದರು. ಅಲ್ಲಿದ್ದ ಭಟ್ಟರು ಎಲ್ಲರ ಕೈಯಿಂದ ಜೇಬಿಂದ ಹೇಳದೇ ಕೇಳದೇ ದುಡ್ಡು ಕಿತ್ತಾಗ, ಆ ದೇವರುಗಳ ಮಹಿಮೆ ತಿಳಿಯಿತು. ಎಲ್ಲರ ಮೇಲೂ ತೀರ್ಥ ಎರಚಿ ಹಣೆಯ ಮೇಲೆ ಕುಂಕುಮವನ್ನು ಬಳೆದಾಗ, ಆದ ಆ ಆನಂದಕ್ಕೆ ಮೇರೆಯೇ ಇಲ್ಲ ಅಂದಳು ನಮ್ಮ ಸೀತಾ. ಆದರೆ ಅವಳ ಮೊಮ್ಮಗಳು ಅನ್ವಿ ಮುಖ ಸಿಂಡರಿಸಿಕೊಂಡು ಇಲ್ಲ ಎಂದಳು.

ಸರಿ ಅಲ್ಲಿಂದ ಮೇಲೆ ಸೀತಾ ರಸೋಯಿ ಗುಡ್ಡದ ಮೇಲೆ ಇದೆ. ನಾವು ನೋಡಬೇಕು ಎಂದು ಈ ಪದ್ಮಾ, ಸರಿತಾ, ಶ್ಯಾಮಲಿ, ವಿಜಯಾ ಎಲ್ಲರೂ




ಮೇಲೆ ಹತ್ತಿ ಹೋದರು. ನಾವು ಅಲ್ಲೇ ನಿಂತೆವು. ಅಲ್ಲೇ ಮೇಲೆ ಹತ್ತಿ ಹೋಗುವವರ ಹಾಗೂ ಹಿಂದಿರುಗಿ ಬರುವವರ ಹುಮ್ಮಸ್ಸು ನೋಡಿ ಪರವಾಗಿಲ್ಲ, ನಮ್ಮಲ್ಲಿ ಮುಂದಿನ ಪೀಳಿಗೆಗಳಿಗೂ ಧರ್ಮದ ಬಗ್ಗೆ ಚಿಂತೆ ಇದೆ ಎಂದು ಮನವರಿಕೆ ಆಯಿತು. ಒಂದು ಘಂಟೆಯ ನಂತರ ನಮ್ಮ ತಂಡ ಕೆಳಗೆ ಇಳಿದು ಬಂದರು. ಏನು ನೋಡಿದ್ರಿ ಅಂತ ಕೇಳಿದ್ರೆ, ಅಲ್ಲಿ ಒಂದು ಗುಹೆ ತರಹ ಇದೆ, ಅಲ್ಲಿ ಸೀತೆ ನಿತ್ಯ ರಾಮ – ಲಕ್ಷ್ಮಣರಿಗೆ ಅಡಿಗೆ ಮಾಡ್ತಿದ್ಲಂತೆ ಎಂದರು. ಇದೇ ಮೊದಲು ಕೇಳಿದ್ದು ನಾವು, ಸೀತೆಗೆ ಅಡಿಗೆ ಬರ್ತಿತ್ತು ಅಂತ!!

ಅದೂ ನೀರು ಬಿಂದಿಗೇಲಿ ತುಂಬಿಕೊಂಡು ಗುಡ್ಡ ಹತ್ತಿ ಗವಿ ಒಳಗೆ ಅಡಿಗೆ ಮಾಡ್ತಿದ್ಲು ಅಂದರೆ ನಮ್ಮ ಈ ಪದ್ಮಾ, ರೇಷ್ಮಾ, ಶ್ಯಾಮಲಿ ಕಲಿಯುವುದು ಎಷ್ಟಿದೆ ಅಂತ ಗೊತ್ತಾಯಿತು. ಇವರೆಲ್ಲಾ ಗಂಡಂದಿರ ಕೈಯಲ್ಲೇ ಕೆಲಸ








ಮಾಡಿಸುವವರು. ಸರಿ ಅಲ್ಲಿಂದ ಕೆಳಗೆ ಮತ್ತೆ ರೋಪ್ ವೇನಲ್ಲಿ ಬಂದು, ಗುಪ್ತ ಗೋದಾವರಿ ಅನ್ನುವ ಚಿಕ್ಕ ಹೊಳೆಯಲ್ಲಿ ಕಾಲು ತೊಳೆದು ಬಂದು ಅಲ್ಲಿಯೇ ಕಟ್ಟೆಗಳ ಮೇಲೆ ಕುಳಿತು ಊಟ ಮಾಡಿದೆವು. ಇನ್ನೇನು ಮತ್ತೆ ಬಸ್ ಪ್ರಯಾಣ ಒಂದು ಹೋಟೆಲ್‌ಗೆ ಚೆನ್ನಾಗಿತ್ತು. ನಮ್ಮ ಅಡಿಗೆಯವರೇ ಅಲ್ಲಿ ಅಡಿಗೆ ಮಾಡಿ, ರಾತ್ರಿ ನಮಗೆಲ್ಲಾ ಊಟ ಹಾಕಿದರು. ಬೆಳಿಗ್ಗೆ, ಬೇಗ ಏಳಬೇಕಪ್ಪ ಇಷ್ಟೊಂದು ಪೂರಿ, ಭಾಜಿ ತಿಂದರೆ ಹೇಗೆ? ಅಂತ ಯಾರೂ ಹೇಳಲಿಲ್ಲ. ಬೆಳಿಗ್ಗೆ ಮತ್ತೆ ಬಸ್ ಹತ್ತಿ ನಡೆದಿದ್ದಾಯ್ತು. ಸುಮಾರು 9.30 ಕ್ಕೆ ತ್ರಿವೇಣಿ ಸಂಗಮ ಕಾಣಿಸಿತು. ಗಂಗೆ, ಯಮುನೆ ಕೂಡಿ ಹರಿಯುವ ಈ ಸಂಗಮ, ಈ ನಾಡಿಗೇ ತಿಲಕವನ್ನು ಇಟ್ಟಂತಿದೆ. ನಡುವೆ ಒಂದು ದಿಬ್ಬ, ಅತ್ತಿತ್ತ ಹರಿಯುತ್ತಾ ಬಂದು ಕೂಡುವ ನೋಟಕ್ಕೆ ಮೇರೆಯೇ ಇಲ್ಲ. ಎಲ್ಲರೂ ತುಸು ದೂರ ನಡೆಯುತ್ತಾ ಗಂಗೆಯ ತೀರಕ್ಕೆ ಬಂದು ಅಲ್ಲಿ ದೋಣಿಗಳಲ್ಲಿ ಕೂತೆವು.





ಆ ದೋಣಿ ದಡದಿಂದ ಮುಂದೆ ಹೋಗಿ ಬೇರೆ ದೋಣಿಗಳ ಜೊತೆ ಸೇರಿತು. ಈ ತ್ರಿವೇಣಿ ಸಂಗಮದಲ್ಲಿ ನಮ್ಮ ಹಿರಿಯರಿಗೆ ತರ್ಪಣ ಬಿಡುವುದನ್ನು ಬಹು ಮಂದಿ ಮಾಡಿದರು. ಹಾಗೆಯೇ ಸುತ್ತಾಡಿ ಮತ್ತೆ ದಡಕ್ಕೆ ಬಂದು ಇಳಿದೆವು. ಮುಂದೆ ಸರಯೂ ನದಿಯ ದಡಕ್ಕೂ ಬಂದೆವು. ಆದರೆ ಅಲ್ಲಿ ಯಾರೂ ಹೊಳೆಯೊಳಗೆ ಇಳಿಯಬಾರದು ಅಂತ ಅಡ್ಡ ಹಾಕಿದ್ದರಿಂದ ಸುಮ್ಮನೆ ನೋಟದಲ್ಲಿಯೇ ತೃಪ್ತರಾಗಿ ಮುಂದೆ ಸರಿದೆವು.

ಮತ್ತೆ ಬಸ್ ಏರಿ, ಅಯೋಧ್ಯಾ ಕಡೆ ಸಾಗಿದೆವು. ಈ ಅಯೋಧ್ಯದಲ್ಲಿ ಹೆಜ್ಜೆಗೊಂದು ದೇಗುಲ. ಹಳೆಯ ನಗರದಲ್ಲಿ ತುಂಬ ನೂಕು ನುಗ್ಗಲು. ಆದರೆ ಬಾಲ ರಾಮನ ಗುಡಿಗೆ ಹೋಗುವ ದಾರಿ, ತುಂಬಾ ಚೆನ್ನಾಗಿದೆ. ಹೊಸದಾಗಿ ಕಟ್ಟಿರುವ ಈ ದಾರಿಯಲ್ಲಿ ಕಾವಲುಗಾರರ ಪಡೆಯೂ ಹೆಚ್ಚಾಗಿದೆ. ಈಗಲೂ ತುಂಬಿ ಹರಿಯುವ ಜನ ಜಂಗುಳಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದೆ.

ನಾವು ಬಂದದ್ದೇ ಬಾಲರಾಮನನ್ನು ನೋಡುವುದಕ್ಕೆ. ಅಯೋಧ್ಯಾ ಮಂದಿರ ಚೆನ್ನಾಗಿ ಕಟ್ಟಿದ್ದಾರೆ. ಮೇಲೆ ಹೋಗುವುದಕ್ಕೆ ಹಲವು ದಾರಿಗಳಿವೆ. ಒಂದು ಮೆಟ್ಟಿಲುಗಳಂತೂ ಇವೆ. ಲಿಫ್ಟ್‌ಗಳೂ ಇವೆ. ಅಂತೆಯೇ ಒಂದು ಇಳಿ ಕಾಲುದಾರಿಯೂ ಇದೆ.




ಗಣಪತಿ, ಥಯ್ಯಾ ಮಾಮ – ಡಾಕ್ಟರನ್ನ, ರೇಷ್ಮಾ ತಾಯಿ, ಯದುಕೀರ್ತಿ, ಅವರನ್ನೆಲ್ಲಾ VIP ಅಂತೆ Wheel Chairನಲ್ಲಿ ಕೂರಿಸಿ ಮಿಕ್ಕವರನ್ನೆಲ್ಲಾ ನಡೆದು ಬರುವಂತೆ ಹೇಳಿದರು. ಆ Wheel Chair ನವರು ಹನುಮಂತನನ್ನು ಮೀರಿಸಿ, ಆ ವೇಗದಿಂದ ಇವರನ್ನೆಲ್ಲಾ ಮೇಲೆ ತಂದು ಬಿಟ್ಟರು. ಎಲ್ಲರೂ ಬಾಲರಾಮನನ್ನು ಕಾಣಲು ಸಾಲಾಗಿ ನಿಂತಿರುವಾಗ ಈ ವಿಐಪಿಗಳಿಗೆ ಬೇಗ ದರ್ಶನವಾಯಿತು. ಆ ಬಾಲರಾಮನ ವಿಗ್ರಹಗಳನ್ನು ಎಲ್ಲರಿಗೂ ಕಾಣುವಂತೆ ಎತ್ತರದಲ್ಲಿ ಕೂರಿಸಿದ್ದು ಚೆನ್ನಾಗಿತ್ತು. ಈ ಥಯ್ಯಾ ಮಾಮನ ಕಣ್ಣಲ್ಲಿ ಧಾರಾಕಾರ ನೀರು. ಆ ಬಾಲರಾಮನನ್ನು ನೋಡಿ ತಣಿಯುವುದೇ ಇಲ್ಲ. ಅಲ್ಲಿ ಆ ಪದ್ಮಾ–ರವಿ ಅವರೂ ಕೂಡ ತನ್ಮಯರಾಗಿ ನಿಂತರು. ಈ ರೇಷ್ಮಾ, ಡಾಕ್ಟರು ಎಲ್ಲಾ ನೋಡಿದರು




ಆದರೆ ಕಣ್ಣೀರು ಇಲ್ಲವೇ ಇಲ್ಲ. ಸುರಿದರೆ ಅದೆಲ್ಲಿ ಮತ್ತೆ ಸರಯೂ ನದಿಯಾಗುತ್ತದೋ ಎಂಬ ಹೆದರಿಕೆಯಿಂದ ಇರಬೇಕು.

ಆಮೇಲೆ ಎಲ್ಲರೂ ಕೆಳಗೆ ಬಂದರೆ ಡಾಕ್ಟರು, ಥಯ್ಯಾ ಮಾಮು, ರೇಷ್ಮಾನ ಅಲ್ಲಿಯೇ ವಿಸಿಟರ್ ಗ್ಯಾಲರಿಯಲ್ಲಿ ಎರಡು ಘಂಟೆ ಕಾಲ ಕೂರಿಸಿ, ಮಿಕ್ಕವರೆಲ್ಲಾ ಎಲ್ಲೆಲ್ಲೋ ಪರಾರಿ. ಕಡೆಗೆ ಎಲ್ಲರೂ ಒಂದೇ ಕಡೆ ಸೇರಿ ಹೋಟೆಲ್‌ಗೆ ಬಂದರು. ಆ ಹೋಟೇಲ್ ಚೆನ್ನಾಗಿದ್ದರೂ, ಊರ ಹೊರಗಿದೆ. ಚೆನ್ನಾಗಿ ದಣಿದಿದ್ದರಿಂದ ಊಟ ಭರ್ಜರಿಯಾಗಿತ್ತು. ಮತ್ತೆ ಬೆಳಿಗ್ಗೆ ಎದ್ದು ಲಕ್ನೋ ನಗರಕ್ಕೆ ಹೊರಟರೆ ಈ ಲಕ್ನೋ ನಗರದಲ್ಲಿ ಉತ್ತರ ಪ್ರದೇಶದ ರಾಜಧಾನಿ ಒಂದೇನಪ್ಪ ಅಂದರೆ ಎಲ್ಲಾ ಕಟ್ಟಡಗಳಿಗೂ ಒಂದು ಮೊಘಲ್ ಗುಂಬಜ್. ಅಲ್ಲಿ ಡಾ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿಯೂ ಒಂದು ಇನ್ಸ್ಟ್ಯೂಟ್ ಮಾಡಿದ್ದಾರೆ.

ನಮ್ಮ ಪದ್ಮಾ, ಭೂಲ್ ಭುಲೈಯಾ ನೋಡಬೇಕು ಅಂತ ನೋಡುವುದಕ್ಕಿಂತ ಎಲ್ಲರಿಗೂ ತೋರಬೇಕು ಎಂಬ ಹುಮ್ಮಸ್ಸು. ಅದನ್ನೂ ನೋಡಿಯಾಯಿತು.



ಭರ್ಜರಿ ಕಟ್ಟಡ. ಹೊಸದಾಗಿ ಕಟ್ಟಿರುವ ಸ್ಥಳಗಳೆಲ್ಲಾ ಚೆನ್ನಾಗಿವೆ. ಹೊಸ ತೋಟಗಳನ್ನು ನೋಡಿ ಆನಂದವಾಯಿತು.

ಆದರೆ ಆಗಲೇ ಶುರುವಾಯಿತು. "ನಾವು ಶಾಪಿಂಗ್ ಹೋಗುವುದು ಯಾವಾಗ?" ಅಂತ. ಅಜಯ್ ತನಗೆ ಗೊತ್ತಿರುವ ಚೆನ್ನಾಗಿರುವ ಸೀರೆ, ಉಡುಪುಗಳ ಶಾಪ್ ಒಂದಿದೆ ಎಂದು ಹೇಳಿ ಅಲ್ಲಿಗೆ ತಂದು ಬಿಟ್ಟ. ಇವರೆಲ್ಲಾ ಅಲ್ಲಿಗೆ ಮುತ್ತಿಗೆ ಹಾಕಿ, "ಅದನ್ನು ತೋರು ಇದನ್ನು ತೋರು ಅಂತ ಎಲ್ಲವನ್ನೂ ಹರದ ಹಾಕಿಸಿದರು. ಆಮೇಲೆ ಈ ಡಾಕ್ಟರು ಯಾವುದೂ ಚೆನ್ನಾಗಿಲ್ಲ ಅಂತಾರೆ. ಒಳಗಿನ ಯಾರು ನೋಡ್ತಾರೆ" ಅಂತ ಗೊಣಗಿದರು. ರೇಷ್ಮಾ ಖಿಲಾಡಿ ಗಣಪತಿಯನ್ನೂ ಹೊರಡಿಸಿಕೊಂಡು ಬೇರೆ



ಇನ್ನೊಂದು ಅಂಗಡಿಗೆ ಹೋದಳು. ಅಲ್ಲಿ ತನಗೆ ಬೇಕಾದ ಡ್ರೆಸ್, ಸೀರೆ ಎಲ್ಲಾ 85 ಸಾವಿರ ರೂಪಾಯಿಗೆ ಕೊಂಡು, ಗಣಪತಿಗೆ ಒಂದು ಎರಡು ಸಾವಿರ ರೂಪಾಯಿಯ ಕುರ್ತಾ, ಸಲ್ವಾರ್ ಕೊಡಿಸಿ ಬಂದಳು.

ಅಂತೂ ಇಂತೂ ಎಲ್ಲಾ ಹೇರಿಕೊಂಡು ನಾವು ಅಂದು ರಾತ್ರಿ ಲಕ್ನೋದಲ್ಲಿ ಕಳೆದು ಮೂರನೆಯ ದಿನವೂ ಎಲ್ಲೆಡೆಗೆ ಶಾಪಿಂಗ್ ಹೋಗಿ ಕಡೆಗೆ 5.00 ಘಂಟೆಗೆ ನಾವು ಲಕ್ನೋ ಏರ್ಪೋರ್ಟಿಗೆ ಬಂದೆವು. ಅಲ್ಲಿ ಇನ್ನೂ 6 ಘಂಟೆಗಳ ಕಾಲ ಕಳೆಯಬೇಕಲ್ಲ ಅನ್ನುವಾಗ ಈ ಅನ್ವಿ ಆಗ ಡಾನ್ಸ್ ಮಾಡಲು ಶುರು ಮಾಡಿದಳು. ಅದನ್ನು ನೋಡುತ್ತಾ ಅಲ್ಲಿದ್ದವರೆಲ್ಲಾ ಬೆರಗಾದರು.

ಅಂತೂ ಅನ್ವಿ ಡಾನ್ಸ್‌ನಿಂದ ನಾವು ವಾರಣಾಸಿ – ಅಯೋಧ್ಯಾ–ಲಕ್ನೋ ಪಯಣ ಸಫಲ ಎನ್ನುವ ಅರಿವಾಯಿತು.

# ಪ್ರವಾಸದ ಅನುಭವ ಕಥನ

## ನಾ ಕಂಡ ರಾಮರಾಜ್ಯ



✍ ಡಾ| ಸುಮಾ ದ್ವಾರಕಾನಾಥ್

ಓದುಗ ಮಹಾಶಯ, ಕ್ಷಮೆ ಇರಲಿ. ದೇವರು ಕೊಟ್ಟ ಈ bonus ಅನ್ನು ತಕ್ಷಣ ಹಂಚಿಕೊಳ್ಳುವ ಮನಸ್ಸಾಗಿ ಕಳೆದ ತಿಂಗಳ ಜಕಾರ್ತ ಮತ್ತು ಬಾಲಿ ಪ್ರವಾಸದ ಅನುಭವವನ್ನು ತಿಳಿಸಿ ಮತ್ತೆ ಹಿಂದಿನ ಪ್ರವಾಸಗಳ ಅನುಭವವನ್ನು ಮುಂದುವರೆಸುತ್ತೇನೆ.

ಮಗಳು ಈ ಸಲ ರಜೆಗೆ ಬಂದಾಗ ಅಮ್ಮ ನೀನು ನನ್ನ ಜೊತೆ ಬಾ, ಒಂದು ತಿಂಗಳಿದ್ದು ಬರುವೆಯಂತೆ ಎಂದು ಕರೆದಾಗ, ನನ್ನ ಆರೋಗ್ಯದ ಏರುಪೇರುಗಳನ್ನು, ದುಡ್ಡಿನ ಆತಂಕವನ್ನಿಟ್ಟುಕೊಂಡು ಸುಮ್ಮನೇ ತಲೆಯಾಡಿಸಿದ್ದೆ. ಕೈಗೆ ಕೋಲೂ ಬಂದು, ದಿನಕ್ಕೊಂದು ಸಣ್ಣ ಪುಟ್ಟ ನೋವುಗಳಿದ್ದೂ, ಕಣ್ಣಿನ ಸುತ್ತ ನವೆ ಅಂತ ಡಾಕ್ಟರ್ ಹತ್ರ ಹೋದ್ರೆ, ಕಣ್ಣಿನೊಳಗೆ hemorrhage ಆಗಿದೆ, ಎರಡೂ ಕಣ್ಣೊಳಗೆ ಮೂರು ಮೂರು injection ಕೊಡಬೇಕೆಂದರು. ಸರಿ, ನನ್ನ ಪ್ರಯತ್ನವೆಂದು ರಾಯರ ಸ್ಮರಣೆ ನಿರಂತರ ಮಾಡಿದ್ದಕ್ಕೆ, doplar scanning ಎಲ್ಲಾ ಆದಮೇಲೇ drops ಹಾಕಿ ಸಾಕು ಅಂದ್ರು. ನನಗೋ ಪಾರಾಗಿದ್ದಕ್ಕೆ ಖುಷಿ. ಅದೇನೋ ಹೇಳ್ತಾರೆಲ್ಲಾ ಹಾಗೆ,´Doctors pour drugs of which they know little, to whom they know nothing ಅಂತ.

ಮಗಳು ಒಂದೇ ಸಮ ವರಾತ ಶುರು ಮಾಡ್ಕೊಂಡ್ಳು. ತಕ್ಷಣ ಹೊರಟುಬಿಡು, ಆರೋಗ್ಯ ಕೈ ಕೊಡುವ ಮುಂಚೆ ಅಂತ, ಟಿಕೆಟ್ನೂ book ಮಾಡಿಬಿಟ್ಳು. ಒಂದು ತಿಂಗಳ ವೀಸಾನೂ ಸಿಕ್ತು. ಅಡ್ಕೋಟಿನ ಮೇಲೆ ಗುಡ್ಡೋಟು ಅಂತ ತಮ್ಮ ತಂಗೀರನ್ನು ಚಾರಿಸಿದೆ. ಮೊದಲನೆ ತಂಗಿ ನವಮಿ, ಮಂಗಳವಾರ, ಅಂತ ನಮ್ಮ ಎಲ್ಲಾ tour ಪ್ಲಾನ್ ನ ಬುಡಮೇಲು ಮಾಡೋಳು, ಈ ಸಲ ಮಕ್ಕಳೆಲ್ಲರ ಬಲವಂತದಿಂದ package tour fix ಮಾಡೇಬಿಟ್ರು.

ಮುಂಬೈಇಂದ ೧೭ ನೇ ತಾರೀಖು ,೬ ಗಂಟೆ ಪ್ರಯಾಣ ಮಾಡಿ ಜಕಾರ್ತ ತಲುಪಿದೆ. ಅಳಿಯ, ಮಗಳು ಅಲ್ಲಿ ಎದುರುಗೊಂಡರು. ನಾಲ್ಕು ದಿನ ಅವರ ಜೊತೆಯಲ್ಲಿದ್ದು ಬಾಲಿಗೆ ತಲುಪಿದೆ. ಬೆಂಗಳೂರಿನಿಂದ ತಮ್ಮ ತಂಗಿಯರ flight ೩ ಗಂಟೆ ತಡವಾಗಿ ಬರುವುದಿತ್ತು. ಸುಮಾರು ೧೧ ಗಂಟೆಗೆ ನಾವೆಲ್ರೂ ಭೇಟಿಯಾದೆವು. ತಮ್ಮ mobile ನಲ್ಲಿ ನಮ್ಮ photo ತೋರಿಸಿ, ನಾಲ್ಕೂ ಜನಕ್ಕೂ ಹೂ ಹಾರ ಹಾಕಿ package ನವರು ಎದುರುಗೊಂಡರು. ಅಲ್ಲಿಂದ ಶುರುವಾಯ್ತು ನಮ್ಮ ಯಾತ್ರೆ. ಎಲ್ಲರ ಹೊಟ್ಟೆ ಕಾದಿದ್ದರಿಂದ ಅನ್ನಪೂರ್ಣ ಎನ್ನುವ Indian restorant ನಲ್ಲಿ ಭರ್ಜರಿ ಊಟವಾಯ್ತು. ಸಂಜೆ ತನಕ rest ಅಂದಿದ್ರೂ, ಒಂದೊಂದು spot ದೂರವಿದ್ದುದರಿಂದ ಕಾರಿನಲ್ಲೇ ತೂಕಡಿಸುತ್ತಾ **ತೀರ್ಥ ಎಂಪುಲ್** ಎನ್ನುವ ಜಾಗಕ್ಕೆ ಹೋದೆವು. ಸುಮಾರು ೧ -೧\೨ ಗಂಟೆ ಪ್ರಯಾಣ ಅಂದೋನು, ಹಳ್ಳಿಯ ಸಣ್ಣ ಸಣ್ಣ ರಸ್ತೆಗಳಲ್ಲಿ horn ಮಾಡದೇ, ಸಿಡಿಮಿಡಿಗೊಳ್ಳದೇ ಚಾಕಚಕ್ಯತೆಯಿಂದ, ಶಾಂತ ಮನೋಭಾವದಲ್ಲಿ ದಾರಿ ಸವೆಸುವ ಅವರ ಮನೋಸ್ಥಿತಿಗೆ ನಿಜವಾಗಲೂ ನಾವು ತಲೆಬಾಗಬೇಕು.  ನಾವು ಹೋಗುವುದೇ ಕಾದಿದ್ದ ಹಾಗೆ ಜೋರು ಮಳೆ ಆರಂಭವಾಯಿತು. ಕೊಡೆಗಳನ್ನು ೨೦,೦೦೦ ರುಪೈಯಾಗೆ ಬಾಡಿಗೆಗೆ ನೀಡುತ್ತಿದ್ದ ಹೆಂಗಸರ ಗಲಾಟೆ, ನಮಗೋ ದುಡ್ಡಿನ exchange value confusion, ಜೊತೆಗೆ ಅವರು ಉಚಿತವಾಗಿ ಕೊಡುತ್ತಿದ್ದ ಲುಂಗಿಗಳನ್ನು ಸುತ್ತಿಕೊಂಡೇ ಹೋಗಬೇಕೆನ್ನುವ ಅವರ ಸಂಪ್ರದಾಯ ಎಲ್ಲಾ ಸೇರಿ ನಮಗೆ ತುಂಬಾ ಗೊಂದಲಕ್ಕಿಟ್ಟುಕೊಂಡಿತು. ಮಗಳು ಕೊಟ್ಟಿದ್ದ conversion ಚೀಟಿ ನೋಡಿ ನೋಡಿ ಕೊಡೆ ಪಡೆದು, ಅಂತೂ ಮಳೆಯಲ್ಲೇ ನೆನೆಯುತ್ತಾ ಹುಷಾರಾಗಿ ಕೊಳದ ಹತ್ತಿರ ಹೋದೆವು.

ಈ ಕೊಳದ ಮಹತ್ವವೇನೆಂದರೆ, ಇಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಮತ್ತು ಇಂದ್ರನ ಪ್ರತಿಮೆ ಮತ್ತು ಹಿನ್ನೆಲೆಯಲ್ಲಿ ಬಾತುರ್ ಬೆಟ್ಟ ಇದೆ. ಇದು ನೈಸರ್ಗಿಕ ಮೂಲದ ನೀರಿನ ಚಿಲುಮೆಗಳು. ವಿಷ್ಣುವಿಗಾಗಿ ದೇವತೆಗಳ ರಾಜ ಇಂದ್ರನಿಂದ ಸೃಷ್ಟಿಸಲ್ಪಟ್ಟಿರುವುದರಿಂದ, ಇಲ್ಲಿ ಸ್ನಾನ ಮಾಡಿದರೆ ಸಕಲ ರೋಗ ನಿವಾರಣೆ ಯಾಗುತ್ತದೆ ಎಂಬ ನಂಬಿಕೆಯೂ ದೃಢವಾಗಿದೆ.  ಇದು ಬಾಲಿಯ ೫ ಮುಖ್ಯ ಚಿಲುಮೆಗಳಲ್ಲಿ ಒಂದು  ಮತ್ತು ಪವಿತ್ರ ಜಲದ ಮೂಲಸೆಲೆಯೂ ಆಗಿದೆ. ಇದರ ಹಿಂದೆ ಒಂದು ರೋಚಕ ಕಥೆಯೂ ಇದೆ. ನಾವಿಷ್ಟು ಸಂಭ್ರಮ ಪಡುವ ಹೊತ್ತಿಗೇ ಮಳೆನಿಂತು ಹೋಯಿತು. ಅವರ ೧೦ ನಿಮಿಷದ ಅವಾಂತರಕ್ಕಾಗಿ ನಾವು ೧೦೬ ರೂಪಾಯಿ ತೆತ್ತಬೇಕಾಯಿತು. ಮಗಳು ಕೊಟ್ಟಿದ್ದ ಚೀಟಿ ಹುಡುಕಿ exchange value ನೋಡಿ ಸ್ವಲ್ಪಸಮಾಧಾನ ಪಟ್ಟುಕೊಂಡಿದ್ದೂ ಆಯ್ತು.

ನಮಗೋ ಕಾಫಿ ಕುಡಿಯುವ ಆತುರ. ಯಾವುದಾದರೂ ಹೋಟೆಲ್ ಗೆ ಕರೆದುಕೊಂಡು ಹೋಗಪ್ಪಾ ಅಂದ್ರೆ, ಕಾಫಿ ತೋಟಕ್ಕೇ ಕರೆದುಕೊಂಡು ಹೋದ. ತೋಟದ ನಡುವಿನ ಕಾಲು ದಾರಿಯಲ್ಲಿ ಒಳಹೊಕ್ಕು ಅಲ್ಲಿಯ ನೋಟ ನೋಡಿದರೆ ಕಾಫಿ ಕುಡಿಯಲೂ ಮನಸ್ಸು ಬರುತ್ತಿಲ್ಲ.  ಜಗತ್ತಿನಲ್ಲೇ ಅತಿ ದುಬಾರಿ ಬೆಲೆಯ ಕಾಫಿ ಅಂತೆ. ಅದರ processing ಕೇಳೇ ನಮಗೆ ಸುಸ್ತಾಯ್ತು. ಕಾಫಿ ಹಣ್ಣನ್ನು civette ಬೆಕ್ಕುಗಳಿಗೆ ತಿನ್ನಿಸಿ, ಅದರ ಮಲದ

ಮೂಲಕ ಬಂದ ಜೀರ್ಣವಾಗದ ಬೀಜಗಳ ಸಿಪ್ಪೆ ತೆಗೆದು ಹುರಿದು ಪುಡಿ ಮಾಡಿ ಕಾಫಿ ಮಾಡಿಕೊಡುತ್ತಾರೆ. ಜಗತ್ತಿನಲ್ಲೇ ಅತಿ ದುಬಾರಿಯಾದ ಕಾಫಿ ಅಂತೆ. ಅದನ್ನು **ಕೋಪಿ** ಎನ್ನುತ್ತಾರೆ. ತೋಟದ ನಡುವೆಯೇ ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿ ಸುಮಾರು ೨೪ ತರದ ಕಾಫಿ ರುಚಿ ನೋಡಲು ಉಚಿತವಾಗಿ ನೀಡುತ್ತಾರೆ. ಶುಂಠಿ, ಕಿತ್ತಲೆ, ಜೇನುತುಪ್ಪ, ನಿಂಬೆ, ಚಾಕೊಲೇಟ್, ಹೀಗೆ ಬಗೆಬಗೆಯ ಸ್ವಾದಗಳ ಕಾಫಿಯನ್ನು ಒಂದೊಂದು ಚಮಚ ರುಚಿ ನೋಡುವ ಹೊತ್ತಿಗೆ ಹೊಟ್ಟೆ ತುಂಬಿರುತ್ತದೆ. ನಂತರ ಪಕ್ಕದಲ್ಲೇ ಇರುವ ಅವರ ಮಾಲ್ ನಲ್ಲಿ ವ್ಯಾಪಾರ ಮಾಡುತ್ತಾರೆ.

ಹಾದಿಯುದ್ದಕ್ಕೂ ಮನೆಯೋ ಮಂದಿರವೋ ತಿಳಿಯದ ಹಾಗೆ ಅಲಂಕೃತಗೊಂಡಿದ್ದವು. ಮನೆಯ ಸುತ್ತಲು compound ನಲ್ಲಿ ದಿಕ್ಕು ದಿಕ್ಕಿಗೂ ಕುಸುರಿ ಕೆತ್ತನೆಯ ಶಿಲಾ ಅಥವಾ ಕರಿಮರದ ಸ್ಥಂಭಗಳು. ಮುಂಬಾಗಿಲಿಗೆ ಎರಡು ಕಡೆಯೂ ಶಿಲಾ ಸ್ಥಂಭಗಳು. ಹಳ್ಳಿಯಾದರೂ ಅವರ ವಾಸ್ತು ಶ್ರೀಮಂತಿಕೆಯು, ರಸ್ತೆಯ ಎರಡೂ ಕಡೆಯ ಸುಂದರ ಭವನಗಳಲ್ಲಿ ಕಣ್ಮನ ಸೆಳೆಯುತ್ತಿದ್ದವು. ಎಲ್ಲ ಕುಸುರಿ ಕೆತ್ತನೆಯ ಚಪ್ಪಟೆಯಾಕಾರದ ಕಂಭಗಳಲ್ಲೂ ಬರೀ ಪೀಠವೇ ಹೊರತು ದೇವರ ಸುದ್ದಿಯಿಲ್ಲ. ಬಾಹ್ಯದಲ್ಲಿ ಇಷ್ಟು ಸಾಂಪ್ರದಾಯಿಕವಾಗಿ ಕಂಡರೂ ಒಳಗಡೆ ಆಧುನಿಕತೆಯ ಬಳಕೆ ನಮ್ಮನ್ನು ಬೆರಗು ಗೊಳಿಸಿದವು. ನಡುನಡುವೆ ರಸ್ತೆ ಮತ್ತು ವೃತ್ತಗಳಲ್ಲಿ ಗಣೇಶ ಹನುಮಾನನ ದೊಡ್ಡ ದೊಡ್ಡ ಪ್ರತಿಮೆಗಳು ಕಂಡು ಬಂದವು.

ಮತ್ತೆ ೧-೧\೨ ಗಂಟೆ ಪಯಣಿಸಿ ಊರೊಳಗಿನ ಚಸ್ಕಾ ಎನ್ನುವ ಪಂಜಾಬಿ ಹೋಟೆಲ್ ಗೆ ಊಟಕ್ಕೆ ಹೋದೆವು. ಅಲ್ಲೋ ಎರಡು ಮೂರು ಭಾರತೀಯ ಗುಂಪುಗಳು ದೆಹಲಿ ಮುಂತಾದ ಕಡೆಗಳಿಂದ ಬಂದವರು, ಬೆಳಗಿನಿಂದ ಅಲ್ಲಲ್ಲಿ ಸಿಕ್ಕುತ್ತಿದ್ದವರು ಊಟಕ್ಕೆ ಇಲ್ಲೇ ಬಂದಿದ್ದರು. ಊಟ ಮುಗಿಸಿ ರಾಮಾಯಣ ಅನ್ನುವ ೫star hotel ಗೆ ರಾತ್ರಿ ವಾಸ್ತವ್ಯಕ್ಕೆ ಹೋದೆವು.

ಮಾರನೆ ದಿನ ಬೆಳಗಿನ ತಿಂಡಿ ಮುಗಿಸಿ ಪ್ರವಾಸಿ ತಾಣವಾದ ಗರುಡ ವಿಷ್ಣುವಿನ ಪ್ರತಿಮೆಯನ್ನು ನೋಡಲು ಹೊರಟೆವು. ನಾವು ಪಿತೃಪಕ್ಷದಲ್ಲಿ ಹೋಗಿದ್ದರಿಂದ, ಅಲ್ಲಿಯೂ ಹಿಂದೂಗಳ ಆಚರಣೆ ಊರಿನುದ್ದಕ್ಕೂ ಢಾಳಾಗಿ ಗೋಚರಿಸುತ್ತಿದ್ದವು. ನಾವು ಮನೆಯ ಬಾಗಿಲಿಗೆ ಮಾತ್ರ ತೋರಣ ಕಟ್ಟಿದರೆ, ಅಲ್ಲಿ ಮನೆಯ ಮುಂದಿನಿಂದ ಬೀದಿಯವರೆಗೆ ಅರ್ಧ ಕಮಾನಿನಾಕಾರದಲ್ಲಿ ವಿಧವಿಧವಾಗಿ ಅಲಂಕರಿಸಿದ ಬೆತ್ತದ ತೋರಣ ರಾರಾಜಿಸುತ್ತಿತ್ತು. ಮನೆಯವರೆಲ್ಲಾ ಸಿಂಗರಿಸಿಕೊಂಡು ಮಂದಿರಗಳಿಗೆ ಪೂಜೆಯ ಸಲುವಾಗಿ ಹೋಗುತ್ತಿದ್ದರು. ಗೇಟಿನ ಮುಂದೆ ಇರುವ ಶಿಲಾ ಸ್ಥಂಭಗಳ ಗೂಡಿನಲ್ಲಿ ದೇವರಿಗೆ ನೈವೇದ್ಯವನ್ನು ಅರ್ಪಿಸಿದರೆ, ನೆಲದ ಮೇಲೆ ಪಿತೃ ರೂಪದ ಪಕ್ಷಿಗಳಿಗೆ ತಾಳೆಗರಿಯ ತಟ್ಟೆಗಳಲ್ಲಿ ನೈವೇದ್ಯವಿರುತ್ತಿತ್ತು.

ಗರುಡ ಪುರಾಣದ ಪ್ರಕಾರ ಗರುಡ ತನ್ನ ತಾಯಿ ವಿನತೆಯನ್ನು, ಅವಳ ಸೋದರಿ ಕುದ್ರುವಿನ ಹಿಡಿತದಿಂದ ಬಿಡಿಸಿಕೊಂಡು ಬರಲು ಅಮೃತ ತರುವ ಸುಮಾರು ೧೨೧ ಅಡಿ ಎತ್ತರದ ಗರುಡನ (**gwk park**) ಪ್ರತಿಮೆಯನ್ನು ನೋಡಲು ಸಾವಿರಾರು ಪ್ರವಾಸಿಗಳು ಪ್ರತಿದಿನ ಬರುತ್ತಾರೆ. ನನಗೆ ಬೆಟ್ಟ ಹತ್ತಲು ಆಗದಿದ್ದುದರಿಂದ golf cart ನಲ್ಲಿ ಹೋಗಿಬಂದೆ. ತಮ್ಮ ತಂಗಿಯರು ಬೆಟ್ಟಹತ್ತಿ ಬಂದರು.

ಸತತವಾಗಿ ಓಡಾಡುತ್ತಿರುವ ಬಸ್ಸಿನಲ್ಲಿ car parking ಗೆ ಬಂದು, ಊಟಕ್ಕೆ ನಡೆಯಪ್ಪಾ ಅಂತ ಡ್ರೈವರ್ ಗೆ ಹೇಳಿದ್ರೆ, ಅಲ್ಲೇ ಮಾಡಲಿಲ್ವಾ ಅಂತ ಕೇಳಿದ. ನನ್ನ ತಮ್ಮನಿಗೆ ಅವನು ಮೊದಲೇ ಕೂಪನ್ ಕೊಟ್ಟಿದ್ದನಂತೆ. ಅದು ತಿಳಿಯಲಿಲ್ಲ. ಮತ್ತೆ ವಾಪಸ್ ಬಸ್ನಲ್ಲಿ ಮೇಲೆ ಹೋಗಿ ಊಟ ಮಾಡಬೇಕಾಯಿತು. ವೆಜಿಟೇರಿಯನ್ ಅಂತ ಹೋದ್ರೆ ಬರೀ ಅನ್ನ ಒಂದಿತ್ತು. ನನ್ನ ತಂಗೀರೋ, ತುಪ್ಪ ಇದೆಯಾ, ಮೊಸರು ಇದೆಯಾ ಅಂತ ಅವರನ್ನಕೇಳಿ ಕೇಳಿ, ಇಲ್ಲ ಅನ್ನಿಸ್ಕೊಂಡು ಅದನ್ನೇ ತಿಂದ ಶಾಸ್ತ್ರ ಮಾಡಿ ಎದ್ದು ಬಂದೆವು. ಊರಿಂದ ತಂದ ಕುಟ್ಟವಲಕ್ಕಿ, ಧಿಡೀರ್ ಉಪ್ಪಿಟ್ಟು, ಚಿತ್ರಾನ್ನದ ಗೊಜ್ಜು ಎಲ್ಲಾ ಹಿಂದಿನ ದಿನದ ಊಟದ ಅನುಭವದಿಂದ ಹೋಟೆಲ್ನಲ್ಲೇ ಬಿಟ್ಟಿದ್ವಿ. ಹಾಗಾಗಿ ಎಲ್ರಿಗೂ ಬೇಜಾರಾಯ್ತು. ಅಲ್ಲಿಂದ ಹೊರಟು ಪಾಂಡವ ಬೀಚ್ ಗೆ ಮಟಮಟ ಮಧ್ಯಾಹ್ನ ಕರೆದುಕೊಂಡು ಹೋದ. ಪ್ರತಿಯೊಂದು ಬಂಡೆಯ ಮೇಲೂ ಪಂಚ ಪಾಂಡವರ ಹೆಸರನ್ನು ದೂರದಿಂದಲೂ ಕಾಣುವ ಹಾಗೆ ಅವರ ಚಿತ್ರದೊಂದಿಗೆ ಢಾಳಾಗಿ ಕೆತ್ತಿದ್ದಾರೆ. ಬೀಚಿನ ನೀರಿಗೆ ನಾನು ತುಂಬಾ tempt ಆದ್ರೂ ಇಳಿಯಲಿಲ್ಲ. ತಂಗೀರಿಬ್ರೂ ನೀರಲ್ಲಿ ಸ್ವಲ್ಪ ಹೊತ್ತು ಇದ್ದು ಬಿಸಿಲಿನ ಬೇಗೆ ತಡೆಯಲಾರದೆ ಬೇಗ ಬಂದರು. ಇನ್ನೊಂದು ತಮಾಷೆ ಹೇಳಬೇಕೆಂದರೆ wash room ಗೆ ಹೋಗಲು ೫೦೦೦, ೩೦೦೦, ೨೦೦೦ ಸಾವಿರ ರುಪ್ಪೈ ಒಂದೊಂದು ಕಡೆ ಕೊಡಬೇಕಾಗಿತ್ತು. ನಾನು ಡಯಾಬಿಟಿಕ್ ಆದ್ರಿಂದ ಮುಖ ನೋಡದೆ ಹೋಗಬೇಕಾಗಿತ್ತು, ಅವರು ಮೂರು ಜನವೂ ಹಾಗೇ ಮ್ಯಾನೇಜ್ ಮಾಡಿದ್ರು.

ಸಂಜೆ **kesak dance** ನೋಡಬೇಕಾಗಿತ್ತು. ಡ್ರೈವರ್ ಗೆ ಅಷ್ಟು ಮನಸ್ಸಿರಲಿಲ್ಲವೇನೋ, ಅವನು ಸಬೂಬು ಹೇಳತೊಡಗಿದ. ಅವನಿಗೆ tour ಮ್ಯಾನೇಜರ್ ನಿಂದಲೂ support ಸಿಗಲಿಲ್ಲ. ಆದಷ್ಟೂ avoid ಮಾಡಿದ. ನಾವು ನೋಡಲೇಬೇಕೆಂದಾಗ ಟಿಕೆಟ್ ತೆಗೆದುಕೊಂಡ. ೫ ಗಂಟೆ ಶೋ ಗೆ ಸಾವಿರಾರು ಜನ ಕ್ಯೂ ನಿಂತು ಟಿಕೆಟ್ ತೆಗೆದುಕೊಂಡು ಒಳಗೆ ಹೋದರೂ, ನಮಗೆ ೭ ಗಂಟೆ ಶೋಗೆ ಕೊಡಿಸಿದರು. ನಾವು ಪಟ್ಟು ಬಿಡದೆ ಅಲ್ಲೇ ಎರಡು ಗಂಟೆ ಕಾಲ ಕೂತು ಕೊನೆಗೆ ಶೋ ನೋಡಿ ಬಂದೆವು.

ಕೆಚಕ್ ನೃತ್ಯ ಬಾಲಿ ಹಿಂದೂ ಜನಗಳ ಒಂದು ಸಾಂಪ್ರದಾಯಿಕ ಗೀತ ನೃತ್ಯ ನಾಟಕ. ನಮ್ಮ ಬಯಲಾಟದ ತರಹ ಇದನ್ನು ದೇವಸ್ಥಾನ ಹಾಗೂ ಅಲ್ಲಿಯ ಸುತ್ತ ಮುತ್ತ ಹಳ್ಳಿಗಳಲ್ಲಿ ಆಡುತ್ತಾರೆ. ೧೯೩೦ ರಲ್ಲಿ ಆರಂಭವಾದ ಈ ಪ್ರದರ್ಶನ ದಲ್ಲಿ ಸುಮಾರು ೧೫೦ ಗಂಡಸರು ಚಕ್ ಚಕ್ ಎಂದು ಸತತವಾಗಿ ಹೇಳುತ್ತಾ ಕೈನ ಹಾವಭಾವಗಳೊಂದಿಗೆ ಒಂದೂವರೆ ಗಂಟೆಗಳ ಕಾಲ ಒಂದು ದೊಡ್ಡ ವೃತ್ತಾಕಾರದಲ್ಲಿ ನೆಲದ ಮೇಲೆ ಕೂತು chorus ನೀಡುತ್ತಿರುತ್ತಾರೆ. ಅವರೆಲ್ಲ ಕರಿ ಬಿಳಿ ಪಪ್ಪಳಿಯ ಲುಂಗಿಯನ್ನುಮಾತ್ರ ಧರಿಸಿರುತ್ತಾರೆ. ಸಮುದ್ರ ತೀರದಲ್ಲಿ ಸಂಜೆ ಇಳಿಮುಖ ಸೂರ್ಯನ ಮುಂದೆ ಬೆಟ್ಟದ ಮೇಲಿನ amphi theater ನಲ್ಲಿ ನಡೆಯುವ ವೈಭವವನ್ನು ನೋಡಿ ಆನಂದಿಸುವುದೇ ಚೆಂದ. ರೂಪಕದ ಕಥೆಯಾದರೂ ಏನು! ನಮ್ಮ ರಾಮಾಯಣದ ಪ್ರಸಂಗವೇ. ಅವರದೇ ಆದ ಬಣ್ಣದಲ್ಲಿ ನಡೆಸುವ ಆಟ. ಮಾಯಾಜಿಂಕೆಯ ಪ್ರಸಂಗದಿಂದ ಆರಂಭಿಸಿ ಸೀತಾಪಹರಣ, ಜಟಾಯು ಮರಣ, ಹನುಮಾನನ ಸಾಹಸ, ರಾವಣ ಮರ್ಧನ ದ ತನಕ ನಡೆಯುವ ಕಥೆ ಪ್ರೇಕ್ಷಕರನ್ನು ಎರಡು ಗಂಟೆಗಳ ಕಾಲ ಮಿಸುಕಾಡದಂತೆ ಹಿಡಿದಿಡುತ್ತದೆ. ಸೀತೆಯ ಆಂಗಿಕ ಅಭಿನಯವಂತೂ ಸಾಕ್ಷಾತ್ ಸೀತೆಯಂತೆಯೇ ಭಾಸವಾಗುತ್ತದೆ. ಹನುಮಾನನ, ರಾವಣನ entry, ನಮ್ಮ ಯಕ್ಷಗಾನವನ್ನೇ ನೆನಪಿಸುತ್ತದೆ.

ಅದೇ ಗುಂಗಿನಲ್ಲೇ ರಾತ್ರಿ ಊಟಕ್ಕೆ ಗಣೇಶ ಎನ್ನುವ Indian restorent ಅಂತ ಡ್ರೈವರ್ ಕಮ್ ಗೈಡ್ ಕರೆದುಕೊಂಡು ಹೋದ. ಬಾಗಿಲಲ್ಲೇ ಬೆಂಗಳೂರಿನ ನಮ್ಮ ಕನ್ನಡದ chef ಸಿಕ್ಕು, ಇಲ್ಲಿ nonveg ಮಾಡ್ತೀವಿ, ಎದುರಿನ ಮಾರವಾರಿ ಹೋಟೆಲ್ ನಲ್ಲಿ ನಿಮಗೆ ಸಸ್ಯಹಾರಿ ಊಟ ಸಿಗುವುದು ಎಂದು ನಮ್ಮನ್ನು ಕಳಿಸಿಕೊಟ್ಟ. ಅಲ್ಲಿ ಬಿಸಿ ಬಿಸಿ ರೋಟಿ ದಾಲ್ ತಿಂದು ಬಂದೆವು. ಅಂದು ರಾತ್ರಿ ರಾಮಾಯಣ್ ಹೋಟೆಲ್ ನಿಂದ ಬಾಲಿಯ **ಮಸಾರಿ ವಿಲ್ಲಾ** ಗೆ ನಮ್ಮ ವಾಸ್ತವವನ್ನು ಬದಲಾಯಿಸಿದರು.

ಅದೋ ಒಂದು ದಟ್ಟ ಕಣಿವೆಯೊಳಗಿತ್ತು. ನಾನೋ ಕೋಲು ಹಿಡಿದೇ, ಮೇಲೆ, ಕೆಳಗೆ ಮೆಟ್ಟಲು ಹತ್ತಿ, ಇಳಿದು ರೂಮು ಸೇರಿಕೊಂಡೆ. ರಾತ್ರಿ ತುಂಬಾ ಸುಸ್ತಾದ್ದರಿಂದ ಬೇರೇನೂ ಯೋಚಿಸದೆ ನಾನು ಹಾಸಿಗೆಯಲ್ಲಿ ಬಿದ್ದುಕೊಂಡೆ. ನನ್ನ ತಂಗಿಯರು ಮಾರನೆದಿನದ ತಯಾರಿ ಮಾಡಿಕೊಂಡು ಮಲಗಿದಾಗ ೧೨ ಗಂಟೆಯಾಯಿತಂತೆ. ನಾನಂತೂ ಮಲಗಿದ ತಕ್ಷಣ ನಿದ್ರಾ ಸಾಮ್ರಾಜ್ಯದಲ್ಲಿದ್ದೆ. ರಾಮಾಯಣ ಹೋಟೆಲ್ಲಿನಲ್ಲಿ bath tub ಒಂದು ಕಡೆ, shower ಇನ್ನೊಂದು ಕಡೆ ಇತ್ತು. ನನಗೇನೂ ತೊಂದರೆ ಆಗಲಿಲ್ಲ. ಆದರೆ ಇಲ್ಲಿ tub ನಲ್ಲಿ ಇಳಿಯಲಾಗದೆ ಅದರ ಅಂಚಿನಲ್ಲಿ ಕೂತು ಸ್ನಾನ ಮುಗಿಸಿದ್ದಾಯ್ತು. ನನ್ನ ತಮ್ಮ ಬೇರೆ ಬಚ್ಚಲ ಮನೆಯನ್ನೆಲ್ಲಾ ತನ್ನ ಸ್ನಾನದ ನೀರಿನಿಂದ ತುಂಬಿಸಿಬಿಟ್ಟಿದ್ದ. ನನಗೋ ಹೆಜ್ಜೆ ಊರಲೂ ಭಯ, ನಾವು ಭಾರತೀಯರು ಇಷ್ಟು ಬೇಜವಾಬ್ದಾರಿಯೆಂದರೆ ಮೈ ವರೆಸಿಕೊಳ್ಳುವ ಟವೆಲನ್ನೇ ನೆಲದ ಮೇಲೆ ನೀರು ವರೆಸಲು ಹಾಕುವುದು. ಅಂತೂ ತುಂಬಾ ಹುಷಾರಿನಿಂದ ಸ್ನಾನ ಮುಗಿಸಿ ಹೊರಬಂದೆ. Charger ಹಾಕಲು ಹಳೇ ಕಾಲದ plug ಗಳು. ಎಷ್ಟು ಸಲ ಫೋನ್ ಮಾಡಿದ್ರೂ ರೂಮ್ ಸರ್ವಿಸ್ ಬರಲೇ ಇಲ್ಲ. ಬೇಗ ಹೊರಡಬೇಕೆಂದು ಯಾರನ್ನುಕರೆಯಲೂ time ಇಲ್ಲ. ಬೆಳಗ್ಗೇ ಕಾಫಿ ಕುಡಿಯದೆ ದಿನವೂ ಶುರುವಾಗೊಲ್ಲ. ಕಾಫಿ ಮಾಡುವ machine ಬಳಸಲೂ ಬರುತ್ತಿಲ್ಲ. ಅಂತೂ ಹಾಗೇ ಮೇಲಿನ ಮಾಳಿಗೆಗೆ ಹೋಗಿ ಕಾಫಿ ತರಿಸಿಕೊಂಡು ಕುಡಿದು cruiseಗೆ ಹೊರಟಿದ್ದಾಯ್ತು.

ನಮ್ಮ ಮುಂದಿನ ಪಯಣ **ನಿರ್ವಾಣ** ವೆಂಬ ದೋಣಿಯಲ್ಲಿ **ನೂಸ ಪೆನಿಡ** ಎನ್ನುವ ದ್ವೀಪಕ್ಕೆ ಹೋಗಲು ಸನೂರ್ harbor ತಲುಪಿದೆವು. ಬಾಡುಂಗ್ ಕೊಲ್ಲಿಯು ಈ ದ್ವೀಪವನ್ನು ಬಾಲಿಯಿಂದ ಬೇರ್ಪಡಿಸಿದೆ. ಇದೊಂದು ಸುಂದರ ಪ್ರವಾಸಿ ತಾಣ.

ದೋಣಿಯಿಂದ ಇಳಿದು ಕಲ್ಲು ಮಣ್ಣಿನ ದಾರಿಯಲ್ಲಿ ಪಾರ್ಕಿಂಗ್ ಲಾಟ್ ಗೆ ಹೋಗಲು ಸ್ವಲ್ಪ ಕಷ್ಟವಾಯಿತು. ಅಲ್ಲಿಯ ಮುಖ್ಯ ಪ್ರೇಕ್ಷಣೀಯ ಸ್ಥಳವೆಂದರೆ **ಉಲುವಾತು ಮಂದಿರ.** ಸಮುದ್ರ ತೀರದಿಂದ ಅದನ್ನು ತಲುಪುವ ರಸ್ತೆ ನಮ್ಮ ಶೃಂಗೇರಿಯ ಆಗುಂಬೆ ಘಾಟನ್ನು ನೆನಪಿಸುತ್ತಿತ್ತು. ಸುತ್ತಿ ಬಳಸಿ ಸಣ್ಣ ಸಣ್ಣ ರೋಡುಗಳಲ್ಲಿ ಶಿಸ್ತಿನಿಂದ ರಸ್ತೆ ನಿಯಮವನ್ನು ಪಾಲಿಸುತ್ತಾ ಸಾಗಿದ ರೀತಿ ಮೆಚ್ಚಲೇ ಬೇಕು. ಈ ಮಂದಿರವನ್ನು ಸ್ಥಾಪಿಸಿದವನು ಜಾವ ನಿವಾಸಿಯಾದ ಹಿಂದೂ ಅರ್ಚಕ ಹತ್ತನೇ ಶತಮಾನದಲ್ಲಿ **ಮಪು ಕುಂತರನ್**. ಅದು ಬಾಲಿ ಜನರ ಆರು ಮುಖ್ಯ ಮಂದಿರಗಳಲ್ಲಿ ಒಂದು. ಉಲುವಾತು ಎಂದರೆ ಅವರ ಭಾಷೆಯಲ್ಲಿ ಭೂ ಭಾಗದ ಅಂಚು ಮತ್ತು ಬಂಡೆ. ಇನ್ನೊಂದು ವಿಶೇಷವೆಂದರೆ ಅದು ಶತಮಾನಗಳಿಂದ ಭೂಕಂಪ ಮತ್ತು ಬಿರುಗಾಳಿಗಳನ್ನು ತಡೆದು ನಿಂತಿರುವುದು. ಈ ಮಂದಿರ ಬಾಲಿಯ ಜನರನ್ನಷ್ಟೇ ಅಲ್ಲದೆ ಲಕ್ಷಾಂತರ ವಿದೇಶೀ ಜನರನ್ನೂ ಆಕರ್ಷಿಸುವ ಕೇಂದ್ರವೆಂದರೆ ತಪ್ಪಾಗಲಾರದು. ಇಲ್ಲಿ ಮುಪ್ಪುರಿಗೊಂಡಿರುವ ಸಂಗತಿಯೆಂದರೆ ಪ್ರಕೃತಿ ಸೌಂದರ್ಯ, ಸಾಂಸ್ಕೃತಿಕ ಪರಂಪರೆ ಮತ್ತು ಆಧ್ಯಾತ್ಮಿಕ ವಾತಾವರಣ. ಈ ಮಂದಿರದ ಮತ್ತೊಂದು ಮಹತ್ವವೆಂದರೆ **ತ್ರಿ ಹಿತ ಕರಣ** ಅಂದರೆ ದೈವ, ಮಾನವ ಮತ್ತು ಪ್ರಕೃತಿಯ ಸಮತೋಲನ.

**ಮುಂದುವರೆಯುವುದು.....**

**ಪುಟ 8 ರಿಂದ......**

ಪ್ರಕೃತಿ ತನ್ನ ಸಂಪತ್ತನ್ನು ಸಮನಾಗಿಯೇ ಹಂಚಿದ್ದಾಳೆ. ಈ ಮಾತೆಗೆ ಪಶು, ಪಕ್ಷಿ, ಕ್ರಿಮಿ, ಕೀಟ ಎಲ್ಲವೂ ಒಂದೇ. ಎಲ್ಲಾ ಜೀವಿಗಳು ಈ ಭೂಮಿಯಲ್ಲಿ ಬಾಳಲು ಹಕ್ಕಿವೆ ಎಂಬ ಭಾವನೆ. ಆದರೆ ಮನುಷ್ಯ ಹಾಗೆ ಭಾವಿಸಿದ್ದಾನೆಯೇ? ಸಾಗರ-ಸಮುದ್ರಗಳು ಹೇಗೋ ಹಾಗೆಯೇ 'ಹವಳ-ದಿಬ್ಬಗಳು'. ಲಕ್ಷಾಂತರ ಮೀನುಗಳಿಗೆ ಹಾಗೂ ಸಸ್ಯಗಳಿಗೆ ನೆಲೆ ನೀಡಿವೆ. ಒಂದು ಚದುರ ಕಿಲೋ ಮೀಟರ್ ನಿಂದ ಸುಮಾರು 15 ಟನ್ ಮೀನು, ಹಾಗೂ ಇತರ ಕಡಲ ಆಹಾರ (seafood) ನಮಗೆ ದೊರೆಯುತ್ತದೆ.

ಬಿರುಗಾಳಿ, ಚಂಡಮಾರುತ, ಸುನಾಮಿಗಳು ಮುಂತಾದ ಕ್ಷೋಭೆಗಳು ಉಂಟಾದಾಗ'ಹವಳ ದಿಬ್ಬಗಳು' ಅಲೆಗಳ ಅಬ್ಬರವನ್ನು ತಗ್ಗಿಸಿ, ಪ್ರವಾಹಗಳಿಂದ ಉಂಟಾಗಬಹುದಾದ ಆಸ್ತಿ-ಪಾಸ್ತಿಯ ನಷ್ಟ ಕರಾವಳಿಯ ಬಳಿಯಲ್ಲಿ ವಾಸವಾಗಿರುವವರ ಸಾವು-ನೋವುಗಳನ್ನು ತಡೆಗಟ್ಟುತ್ತವೆ. ಇವುಗಳ ನಡುವೆ ಅಗಣಿತ ಸಂಖ್ಯೆಯಲ್ಲಿ ಅನೇಕ ಸೂಕ್ಷ್ಮಜೀವಿಗಳು ಅಡಗಿಕೊಂಡಿವೆ. ಅರ್ಬುದ ರೋಗ (ಕ್ಯಾನ್ಸರ್), ಏಡ್ಸ್ ಅಂತಹ ಭಯಂಕರ ಕಾಯಿಲೆಗಳಿಗೆ ಮದ್ದು ಹುಡುಕಿ ಹೊರಟಿರುವ ಅನೇಕ ವೈದ್ಯರುಗಳು ಈ ನಿಟ್ಟಿನಲ್ಲಿ ಅಧ್ಯಯನ ಹಾಗೂ ಸಂಶೋಧನೆಗಳನ್ನು ನಡೆಸುತ್ತಾರೆ.

ಈ ಧರೆಯ ಅದ್ಭುತ ನಿಧಿನೆಲೆ ಎನಿಸಿಕೊಂಡಿರುವ 'ಹವಳದಿಬ್ಬ'ಗಳ ರಮ್ಯ, ರಮಣೀಯ ದೃಶ್ಯವನ್ನು ವೀಕ್ಷಿಸಲು ಪ್ರವಾಸಿಗರು ಹಿಂಡು-ಹಿಂಡಾಗಿ ಬರುವುದರಿಂದ ಪ್ರವಾಸೋದ್ಯಮದಿಂದ ಕರಾವಳಿ ಪ್ರದೇಶದಲ್ಲಿರುವವರಿಗೆ 'ಗಳಿಕೆ' ಲಭ್ಯವಾಗುವುದನ್ನು ಅಲ್ಲಗಳೆಯುವಂತಿಲ್ಲ.

ಇಷ್ಟಾದರೂ ವಿವಿಧ ದಿಶೆಗಳಿಂದ, ಆಗುತ್ತಿರುವ ಅಕ್ರಮಣದಿಂದಾಗಿ ಈ ಪ್ರಾಕೃತಿಕ ವೈಭವ, ಕಳಾಹೀನಗೊಂಡು ಅಳಿವಿನ ಅಂಚಿಗೆ, ವೇಗವಾಗಿ ಜಾರುತ್ತಿರುವುದನ್ನು ನಾವು ಹೇಗಾದರೂ ತಡೆಗಟ್ಟಬೇಕಾಗಿರುವುದು ಅನಿವಾರ್ಯವಾಗಿದೆ. ಸರ್ವನಾಶವಾಗಬಾರದು ಭೂಮಿಯ ಬಿಸಿ ಏರುವಿಕೆಯಿಂದ ಹವಳಗಳು ಕರಗುತ್ತಿವೆ. ನದಿಗಳಿಂದ ಹರಿದು ಬರುವ ಕಲುಷಿತ ನೀರಿನಿಂದ ಮೀನುಗಳು ಸಾಯುತ್ತಿವೆ. ಹವಳದ ಸುಣ್ಣಾಂಶ (ಕ್ಯಾಲ್ಶಿಯಮ್) ವನ್ನು ಸಂಗ್ರಹಿಸಿ, ಪೌಷ್ಟಿಕ ಆಹಾರಕ್ಕೆ ಪೂರಕವಾಗಿ ನೀಡುತ್ತಿರುವುದು ಸಹ ನಡೆಯುತ್ತಿದೆ. ಆದರೆ ಈ ಬಗೆಯ ಕ್ಯಾಲ್ಶಿಯಮ್ ಸೇವನೆಯಿಂದ ಆರೋಗ್ಯದ ದೃಷ್ಟಿಯಿಂದಲೂ ಅಪಾಯಕಾರಿ ಎಂಬ ಅಂಶ ತಿಳಿದುಬಂದಿದೆ.

ಹಾನಿಕಾರಕ ಮೀನುಗಾರಿಕೆ ವಿಧಾನ ಬಳಕೆಯಿಂದಾಗಿ ಹವಳದಿಬ್ಬಗಳು ಕಣ್ಮರೆಯಾಗುತ್ತಿವೆಯೆಂದು ತಿಳಿದು ಬಂದಿದೆ. ಮೊಟ್ಟ ಮೊದಲನೆಯದಾಗಿ ಡೈನಮೇಟ್ ಸಿಡಿಸುವುದು, ಎರಡನೆಯದಾಗಿ 'ಸಿಯನೈಡ್' ನೀರಿಗೆ ಬಿಡುಗಡೆ ಮಾಡಿ, ಮೀನುಗಳನ್ನು ದಿಗ್ಭ್ರಮೆಗೊಳಿಸಿ ಅವುಗಳನ್ನು ಮೀನಿನ ಕೊಳಗಳಾಗಿ (fish tanks) ಮಾರುತ್ತಾರೆ. ಈ ಮೊದಲೇ ಹೇಳಿದಂತೆ ದಿನೇ ದಿನೇ ಧರೆಯ ಶಾಖ ಏರುತ್ತಿರುವುದರಿಂದ 'ಹವಳ'ದ ಬಣ್ಣ ಬಿಳಿಚಿಕೊಳ್ಳುತ್ತಿದೆ. ಗಣಿಗಾರಿಕೆ, ಕಟ್ಟಡಗಳ ನಿರ್ಮಾಣದಿಂದ ಬರುವ ಗಷ್ಟು ಸುತ್ತಲೂ ಆವರಿಸಿಕೊಂಡು ಸೂರ್ಯಕಿರಣಗಳು ಹವಳ ದಿಬ್ಬಗಳಿಗೆ ಮುಟ್ಟದೆ ಅವುಗಳು ಸಾಯುತ್ತಿವೆ. ಹವಳದಿಂದ ಮಾಡಿದ ಹಾರ ಧರಿಸಿಕೊಂಡು ಮೆರೆಯುವವರಿಗೆ ಈ ಬಗ್ಗೆ ಚಿಂತನೆ ಮಾಡುವುದು ಅಗತ್ಯ ಎಂದೇ ನನ್ನ ಅನಿಸಿಕೆ!

ಇನ್ನು ಮುಂದೆಯಾದರೂ ಎಲ್ಲರೂ ಅಳಿದುಳಿದಿರುವ ಕಡಲಡಿಯ ಈ ಅಪೂರ್ವ ಸಂಪತ್ತನ್ನು ಮುಂದಿನ ಪೀಳಿಗೆಗೆ ಕಾದಿರಿಸಲು ಕಂಕಣಬದ್ಧರಾಗಲೇಬೇಕು.

## ಕರ್ನಾಟಕ ರಾಜ್ಯೋತ್ಸವ ದಿನ

ಕರುನಾಡು ಇದರ ಹೆಸರು ಕರ್ನಾಟಕ,
ಭಾರತ ಮಾತೆಯ ಸುಪುತ್ರಿ ಕರ್ನಾಟಕ,
ಮಾರುತಿಯ ಜನಿಸಿದ ನಾಡು ಕರ್ನಾಟಕ,
ವೀರರು ಉದಿಸಿದ ಬೀಡಿದು ಕರ್ನಾಟಕ.

ಕದಂಬ, ಗಂಗ, ಚಾಲುಕ್ಯ ರಾಷ್ಟ್ರಕೂಟರು,
ನಾಡು ಕಂಡ ಹೆಮ್ಮೆಯ ರಾಜವಂಶಜರು,
ಹಂಪಿ ದೊರೆಗಳು ಕನ್ನಡ ಧ್ವಜ ಮುಗಿಲಿಗೇರಿಸಿದರು
ಕಾವೇರಿ ಗೋದೆಯರನ ಸೀಮೆ ಮಾಡಿದವರು,

ಆದಿಕವಿ ಪಂಪ, ರನ್ನ ಹರಿಹರ ರಾಘವಾಂಕರು,
ಬಸವ ಅಲ್ಲಮ,ಅಕ್ಕಮಹಾದೇವಿ ವಿದುಷಿಯರು,
ಕುಮಾರವ್ಯಾಸ, ಪುರಂದರ, ಕನಕ ವಿಜಯರು
ಕುವೆಂಪು, ಬೇಂದ್ರೆ, ಮಾಸ್ತಿ ಕನ್ನಡಕೆ ಸಿರಿ ದಾತರು

ಹರಿದು ಹೋದ ಕನ್ನಡ ನಾಡು ನೆಲ ಸಂಸ್ಕೃತಿ,
ಒಗ್ಗೂಡಿಸಲು ಬೆವರೆರೆದರು ಕನ್ನಡ ಸಂತತಿ,
ಬಿಎಂಶ್ರೀ ಆಲೂರ, ಪಂಜೆ ಹುಯಿಲಗೋಳ
ಮುತ್ಸದ್ದಿಗಳ ಕನಸು ನೆನಸಾದ ಕರ್ನಾಟಕ ನೆಲ.

ನವೆಂಬರ ಮೊದಲ ತಿಥಿ ರಾಜ್ಯೋತ್ಸವ ದಿನ,
ವರುಷ ಕಾದಿದ ಮೇಲೆ ಬರುವ ಸಂತಸದ ದಿನ,
ಕನ್ನಡದ ವೈಭವನ ಮನದಲಿ ನೆನಿಸುವ ದಿನ,
ಕರ್ನಾಟಕ ಸಮಾಜಕೆ ಸೇವೆ ಸಲ್ಲಿಸುವ ದಿನ.

ಜಯ ಕರ್ನಾಟಕ, ಜಯ ಹಿಂದ್

●ವಿಠ್ಠಲ ಕಟ್ಟೆ

# ಗ್ರ್ಯಾಂಡ್ ಜೀರೋ



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ದೇವರಂಥಾ ಹುಡುಗ, ಎಷ್ಟನ್ಯಾಯ.
ಆರ್ ಯು ಶೂರ್. ಲಿಸ್ಟನಲ್ಲಿ ಇನ್ನೂ ಅವನ ಹೆಸರು ಬಂದಿಲ್ವಲ್ಲ ಸಾವೇ ಅವನನ್ನು ಇಷ್ಟು ಸಾವಿರ ಮೈಲಿ ದೂರ ಎಳೆದುಕೊಂಡು ಬಂತೇನೋ ಅಲ್ಲಾ.
ಸಧ್ಯ. ಮದುವೆ ಆಗಿರಲಿಲ್ಲ.
ಒಬ್ಬನೇ ಮಗನಂತೆ ಅಂಥಾ ಶಾಪ ಯಾವ ತಂದೆ ತಾಯಿಗೂ ಬೇಡ.
ದುಡ್ಡಿನಾಸೇಗೆ ಅಮೆರಿಕಾಗೆ ಕಳಿಸಿಬಿಡ್ತಾರೆ. ಈಗ ನೋಡಿ.
ಹಾಗೇನೂ ಹೇಳೋಕಾಗೊಲ್ಲ. ಕಾಲ ಬಂದ್ರೆ ಕೂತ ಜಾಗದಲ್ಲೇ ಸೂರು ಕಳಚಿ ತಲೆಮೇಲೆ ಬೀಳುತ್ತೆ.
ಯಾರ ಪಾಪಕ್ಕೆ ಯಾರ ಬಲಿ.
ಮಿಸಿಂಗ್ ಅಂತಾರಲ್ಲಾ. ಏನೋ ಅದೃಷ್ಟ ಇದ್ರೆ.. ಹೇಳೋಕಾಗೊಲ್ಲ
ಥ್ಯಾಂಕ್ ಗಾಡ್ ಯೂ ಆರ್ ಲಕ್ಕಿ ನಳಿನಿ.
ಈ ಮಾತುಗಳೇ ಪ್ರತಿಸಲ ಕೇಳಬಂದಾಗ ನಳಿನಿಯ ಹೊಟ್ಟೆಯಲ್ಲಿ ಗರಗಸ ಆಡಿಸುತ್ತಿದ್ದುದು.
ನಳಿನಿಯ ಮಗ ಶಶಿಧರ. ನೀರಜಾ ಮಗ ಪ್ರದ್ಯುಮ್ನ. ಇಬ್ಬರೂ ಅಂದು ಬೆಳಗ್ಗೆ ಕೆಲಸಕ್ಕಾಗಿ ವರ್ಲ್ಡ್ ಟ್ರೇಡ್ ಸೆಂಟರ್‌ಗೆ ಹೋಗಿದ್ದರು.
ಶಶಿ ಮರಳಿ ಬಂದಿದೆ. ಪ್ರದ್ಯುಮ್ನ ಬಂದಿರಲಿಲ್ಲ.
ಪ್ರದ್ಯುಮ್ನ ನಳಿನಿ ತಂಗಿ ನೀರಜಾಳ ಒಬ್ಬನೇ ಮಗ. ತಂಗಿ ಅಂದರೆ ಚಿಕ್ಕಮ್ಮನ ಮಗಳು. ಒಂದೆರಡು ತಿಂಗಳು ಚಿಕ್ಕವಳು. ಅಕ್ಕಪಕ್ಕದ ರಸ್ತೆಯಲ್ಲಿದ್ದ ನಳಿನಿ, ನೀರಜಾ ಒಟ್ಟಿಗೆ ಆಡಿ ಬೆಳೆದವರು. ಒಟ್ಟಿಗೆ ಸ್ಕೂಲಿಗೆ ಹೋಗಿ, ಒಟ್ಟಿಗೆ ಸಿನಿಮಾ ನೋಡಿ. ಒಟ್ಟಿಗೆ ಚೆಂದದ ಹುಡುಗರ ನೋಡಿ ಕೆಂಪಾಗಿ ದೊಡ್ಡವರಾದವರು. ಬಿ. ಎಸ್ಸಿ ಮುಗಿಸಿದ ಮೇಲೆ ಮೊದಲು ನೀರಜಾ ಕೆಇಬಿಯಲ್ಲಿ ಇಂಜಿನಿಯರ್ ಆಗಿದ್ದ ಜನಾರ್ಧನನ್ನು ಮದುವೆಯಾಗಿದ್ದಳು. ನಳಿನಿ ಕೆಮಿಕಲ್ ಇಂಜಿನಿಯರ್ ಶೇಖರನನ್ನು ಮದುವೆಯಾಗಿ ಅಮೆರಿಕಾಗೆ ಹಾರಿ ಹೋಗಿದ್ದಳು. ಆ ಮೇಲೆ ಅವರಿಬ್ಬರೂ ಭೇಟಿಯಾಗಿದ್ದುದ್ದು ಇದು ವಿರಳ. ನಳಿನಿ ಭಾರತಕ್ಕೆ ಬಂದಾಗ. ಒಂದೋ ಎರಡೋ ಗಂಟೆಗಳ ಕಾಲ. ಪ್ರತಿಸಲ ಬೆಂಗಳೂರಿಗೆ ಬಂದಾಗ ಹಾಗೇ ಆಗುತ್ತಿತು. ಮೂರು ವಾರ ರಜಾದಲ್ಲಿ ತವರುಮನೆ ನೆಂಟರು. ಅತ್ತಮನೆ ನೆಂಟರನ್ನು ನೋಡಬೇಕು. ಕಮರ್ಶಿಯಲ್ ಸ್ಟ್ರೀಟ್‌ನಲ್ಲಿ ಸಲ್ವಾರ್ ಕಮೀಜ್ ಶಾಪಿಂಗ್. ಚಿಕ್ಕಪೇಟೇಲಿ ರೇಷ್ಮೆ ಸೀರೆ ಶಾಪಿಂಗ್, ಕಾವೇರಿಯಿಂದ ಉಡುಗೊರೆ ಕೊಡಲು ಗಂಧದ ವಿಗ್ರಹಗಳು. ಎಂಟಿಆರ್‌ನಲ್ಲಿ ದೋಸೆ ಪ್ರೋಗ್ರಾಂ. ಸುಬ್ಬಮ್ಮನ ಅಂಗಡಿಯಿಂದ ಸಂಡಿಗೆ. ಅಲ್ಲಿ ಪಾರ್ಟಿ, ಇಲ್ಲಿ ಊಟ ನಡುವೆ ಒಂದೆರಡು ಕನ್ನಡ ಸಿನಿಮಾಗಳು, ಗಾಂಧಿಬಜಾರಿನಲ್ಲಿ ಕನ್ನಡ ಪುಸ್ತಕಗಳ ಖರೀದಿ, ಮಧ್ಯೆ ಒಂದೂ ಎರಡೋ ಗಂಟೆ ನೀರಜಾ ಮನೆಗೂ ಭೇಟಿ. ಅವಳ ಕೈಲಿ ಬೈಸಿಕೊಂಡು ಮುಂದಿನ ಸಲ ಖಂಡಿತ ಅವಳ ಮನೆಯಲ್ಲೇ ಎರಡು ದಿನ ಕಳೆಯುವ ಭರವಸೆ. ಹೀಗೇ ನಡೆಯುತ್ತಿತ್ತು. ೨೫ ವರ್ಷಗಳ ಕಾಲ.
ಹೋದ ವರ್ಷ ರಜಾದಲ್ಲಿ ನೀರಜಾ ಮನೆಗೆ ಹೋದಾಗ ಅದೇ ತಾನೇ ಇಂಜಿನಿಯರಿಂಗ್ ಮುಗಿಸಿದ್ದ ಪ್ರದ್ಯುಮ್ನ. ತುಂಬಾ ಚೆನ್ನಾಗಿ ಮಾಡಿದ್ದ. ಕ್ಯಾಂಪಸ್‌ಇಂಟರ್‌ವ್ಯೂನಲ್ಲಿ ಬೆಂಗಳೂರಲ್ಲಿ ಒಳ್ಳೆ ಕಂಪನಿಯಲ್ಲಿ ಒಳ್ಳೆ ಸಂಬಳದ ಕೆಲಸವೂ ಸಿಕ್ಕಿತ್ತು. ಆದರೆ, ನಳಿನಿಯೇ ನೀರಜಾ, ಜನಾರ್ದನರಿಗೆ ಪ್ರದ್ಯುಮ್ನನನ್ನು ಅಮೆರಿಕಾಗೆ ಕಳಿಸಲು ಒಪ್ಪಿಸಿದ್ದಳು. ಅಮೆರಿಕಾದ ಜೀವನ ಶೈಲಿ, ಅಮೆರಿಕಾದ ವೈಭವ, ಅಮೆರಿಕಾದಲ್ಲಿ ಪ್ರದ್ಯುಮ್ನನಂಥಾ ಪ್ರತಿಭಾವಂತರಿಗೆ ಸಿಗುವ ಅವಕಾಶಗಳು, ಮನ್ನಣೆ, ಹಣ... ಎಲ್ಲವನ್ನೂ ವರ್ಣಿಸಿದ್ದಳು. "ನೀರಜಾ, ಥಿಂಕ್ ಆಫ್ ಹಿಸ್ ಫ್ಯೂಚರ್. ಇಲ್ಲೇನಿಟ್ಟಿದೆ ನಮ್ಮ ಯಂಗ್‌ಸ್ಟರ್ಸ್‌ಗೆ..." ಎಂದಿದ್ದಳು.
ಆ ಕ್ಷಣದಲ್ಲಿ ನೀರಾಜಾಗೆ ತನ್ನ ಗಂಡ ೩೫ ವರ್ಷಗಳು ಕೆಇಬಿಗೆ ಮಣ್ಣು ಹೊತ್ತದಕ್ಕೆ ಕಾಸು ಕಾಸು ಲೆಕ್ಕಹಾಕಿ ಹೊಸಕೆರೆಹಳ್ಳಿಯಲ್ಲಿ ೩೦-೪೦ರಲ್ಲಿ ಕಟ್ಟಿದ್ದ ಈ ಸಣ್ಣ ಮನೆ. ತನ್ನ ಪತಿಸಲ ಒಂದು ರೇಷ್ಮೆ ಸೀರೆ ಕೊಳ್ಳಬೇಕಾದರೆ ಡಿಸ್ಕೌಂಟ್ ಸೇಲ್‌ಗಳಲ್ಲಿ ಪರದಾಡ ಬೇಕಾಗಿದ್ದ ತನ್ನ ಸ್ಥಿತಿ, ಪ್ರದ್ಯುಮ್ನನಿಗೆ ಟೂವೀಲರ್ ಕೊಡಿಸೋಕೆ ತಾವು ಎತ್ತಿದ ಸಾಲ ಎಲ್ಲಾ ಮನಸಿನಲ್ಲಿ ಹಾದು ಹೋಯಿತು. ಜನಾರ್ದನನೂ ಶೇಖರನಷ್ಟೇ ಬುದ್ಧಿ ವಂತ ನಾವಿಲ್ಲಿದ್ದು ಕಡಿದಿದ್ದೇನು? ಇರೋನೊಬ್ಬನು... ಪರದೇಶದಲ್ಲಿ ಹೇಗೆ... ಎಂದು ನೀರಜಾ ಅನುಮಾನಿಸಿದಾಗ. ನಾವಿಲ್ಲಾ ನೀರಜಾ, ನಮ್ಮನೇಲೇ ಇರಲಿ ಪ್ರದ್ಯುಮ ಅವನಿಗೆ ಎಲ್ಲಾ ಅಭ್ಯಾಸವಾಗುವವರೆಗೂ ನಾನು ನೋಡ್ಕೊತೀನಿ... ನೀರಜಾ ನಂಗೆ ಪ್ರದ್ಯುಮ್ನ ಬೇರೆ. ಶಶಿ ಬೇರೆ ಏನು?
ತಾನೇ ಪ್ರದ್ಯುಮ್ನನನ್ನು ಅಮೆರಿಕಾಗೆ ಎಳೆದು ತಂದಿದ್ದು. ಇಲ್ಲದಿದ್ದರೆ ಇಂದು ಅವನು ಬೆಂಗಳೂರಲ್ಲೇ ಕೆಲಸ ಮಾಡಿಕೊಂಡು ಬೆಚ್ಚಗೆ ತಂದೆ ತಾಯಿ ಮಡಿಲಲ್ಲಿರುತ್ತಿದ್ದ.

ನಳಿನಿಯನ್ನು ಈ ಅಪರಾಧಿ ಭಾವನೆ ಕೊರೆದು ತಿನ್ನುತ್ತಿತ್ತು. ಮೊದಲೆಲ್ಲಾ ತುಂಬಾ. ಸಹಾನುಭೂತಿಯಿಂದಿದ್ದ ಶೇಖರ ಕೂಡ ಇತ್ತೀಚೆಗೆ ಕಿರಿಕಿರಿಗೊಂಡಿದ್ದ.
ನಳಿನಿ, ನೀನು ಓವರ್ ರಿಯಾಕ್ಟ್ ಮಾಡ್ತಿದೀಯಾ... ಹೀಗೆ ಹಗಲು ರಾತ್ರಿ ಕೊರಗ್ತಾ ಕೂತ್ರೆ ಪ್ರದ್ಯುಮ್ನ ವಾಪಸ್ಸು ಬರ್ತಾನಾ.."
"ಐ ಥಿಂಕ್ ಯೂ ಶುಡ್ ಸೀ ಅ ಕೌನ್ಸೆಲ್ಲರ್."
"ಅವನೊಬ್ನೆ ಏನು. ಎಷ್ಟು ಜನ ಹೋದರು ಅವನ ಜೊತೆ. ದೊಡ್ಡ ದುರಂತ ಇದು. ಯಾರ್‍ಯಾರಿಗೇಂತ ಹೀಗೇ ಅಳ್ತಾ ಕೂತಿರ್ತೀ ನೀನು..."
"ನೀನು ಪ್ರದ್ಯುಮ್ನನಿಗೆ ಒಳ್ಳೇದಾಗಲೀಂತ ತಾನೇ ಇಲ್ಲಿಗೆ ಕರೆಸಿದೆ... ಹೀಗಾಗುತ್ತೇಂತ ಯಾರಿಗೆ ಗೊತ್ತಿತ್ತು..."
"ನಳಿನಿ... ಯೂ ಶುಡ್ ಬಿ ಹ್ಯಾಪಿ ದಟ್ ಶಶಿ ಈಸ್ ವಿದ್ ಅಸ್... ವಿ ಆರ್ ಲಕ್ಕಿ.."
ನಳಿನಿ ಅಲ್ಲಿಂದೆದ್ದು ಹೋಗಿದ್ದಳು.
ಶಾಪಿಂಗ್ ಮಾಲ್‌ಗಳಲ್ಲಿ ಹ್ಯಾಮ್‌ಬರ್ಗರ್ ವಾಸನೆ ಸುತ್ತುವರಿದಾಗ ಮ್ಸ್... ಐ ಸ್ಮೆಲ್ ಸಮ್ ಥಿಂಗ್ ಯಮ್ಮಿ... ಎಂದು ಬಾಯಿ ಚಪ್ಪರಿಸುತ್ತಿದ್ದ, ಇದ್ದಕ್ಕಿದ್ದಂತೆ ಏನಾದರೂ ಆಘಾತದ ಸುದ್ದಿ ಕೇಳಿದಾಗ. ಓ ಜೀಸಸ್ ಎಂದು ಉದ್ಗರಿಸುತ್ತಿದ್ದ, ಮಾ, ಬೇರೆಯವರು ಏನೋ ಅಂದ್ಕೊಳ್ತಾರೇಂತ ಯಾಕೆ ಅಷ್ಟೊಂದು ವರಿ ಮಾಡ್ಕೋತಿ. ಇಟ್ ಈಸ್ ದೇರ್ ಪ್ರಾಬ್ಲಮ್ ಎಂದು ಸಮಾಧಾನ ಮಾಡುತ್ತಿದ್ದ. ಮಾ. ಎಷ್ಟು ವರ್ಷ ಆಯ್ತು ನೀನಿಲ್ಲಿಗೆ ಬಂದು... ೨೫ ವರ್ಷ... ಥಿಂಕ್ ಅಮೆರಿಕನ್ ಎಂದು ಚುಡಾಯಿಸುತ್ತಿದ್ದ, ಮುಂದಿನ ವಾರ, ಐ ಯಾಮ್ ಗೋಯಿಂಗ್ ಟು ಮೂವ್ ಇನ್ ವಿದ್ ಕೆಲ್ಲಿ. ನಾನು ಕೆಲ್ಲಿ ಒಂದು ವರ್ಷ ಒಟ್ಟಿಗೆ ಇದ್ದು ಆಮೇಲೆ ಡಿಸೈಡ್ ಮಾಡ್ತೀವಿ ಮದುವೆ ಮಾಡ್ಕೊಳ್ಳಾದಾ ಅಂತ ಕೂಲಾಗಿ ಹೇಳಿದ್ದ ಶಶಿ ಪ್ರದ್ಯುಮ್ನನಿಗಿಂತ ಎಷ್ಟು ಭಿನ್ನ.
ಧಡಾರನೆ ತನ್ನ ಬದುಕಿನಲ್ಲಿ ಬಂದ ಪ್ರದ್ಯುಮ್ನ ಆತ್ಮೀಯತೆಯ ಖುಷಿಯ ಸೊಗಡನ್ನು ಮನೆ ತುಂಬಾ ಹರಿಸಿ ಬಿಟ್ಟಿದ್ದ.
"ಆಂಟಿ, ಮೇಸೀಸ್‌ನಲ್ಲಿ ಸೇಲ್ ಇದೆಯಲ್ಲಾ. ನಾನು ಕಕ್ಕೊಂಡು ಹೋಗ್ತಿನಿ. ಬನ್ನಿ..."
"ಆಂಟಿ ಇವತ್ತು ಅಪ್ಪ, ಅಮ್ಮನ ವೆಡಿಂಗ್ ಆ್ಯನಿವರ್ಸರಿ ಅಲ್ಲ. ಕ್ವೀನ್ಸ್ ದೇವಸ್ಥಾನಕ್ಕೆ ಹೋಗಿ ಬರೋಣ."
"ಆಂಟಿ, ಎಷ್ಟು ಜನನ್ನ ಕರೆದುಬಿಟ್ಟಿದೀರಿ ಊಟಕ್ಕೆ. ಕೋಸಂಬರಿಗೆ ಸೌತೆಕಾಯಿ ಹಚ್ಚಿಕೊಡ್ಲಾ?"
"ಆಂಟಿ, ಶಶೀಗೆ ಜ್ವರ ಬಿಡೋವರೆಗೂ ನಾನು ಪಕ್ಕದಲ್ಲಿ ಕೂತಿರ್ತೀನಿ. ನೀವು ಹೋಗಿ ಮಲಕ್ಕೊಳ್ಳಿ..."
"ಆಂಟಿ, ನಂಗೆ "ದೋಣಿ ಸಾಗಲಿ" ಹೇಳಿಕೊಡಿ. ಯುಗಾದಿ ದಿನ ಕನ್ನಡ ಕೂಟ ದಲ್ಲಿ ಹಾಡಬೇಕು."
"ಆಂಟಿ, ನಿಮ್ಮ ಅಮೆರಿಕಾ ಕಾಫಿ... ದೂರದಿಂದ ಘಂ ಅಂತ ವಾಸನೆ. ಬಾಯಲ್ಲಿಟ್ಟು ಕೊಂಡ್ರೆ ಹಾರಿಬಲ್!"
ನಳಿನಿ ಅವನನ್ನು ರೇಗಿಸುತ್ತಿದ್ದುದೂ ಉಂಟು.
"ನೋಡು, ನಿನ್ನ ಮೇರಾ ಭಾರತ್ ಮಹಾನ್ ಆ್ಯಟಿಟ್ಯೂಡ್ ಎಲ್ಲಾ ಎಲ್ಲೀವರೆಗೆ? ನೀನೂ ಒಂದು ಅಮೆರಿಕನ್ ಹುಡುಗಿ ಮೋಹಪಾಶದಲ್ಲಿ ಬಿದ್ದೀಂದ್ರೆ..."
"ಆಂಟಿ, ಸಧ್ಯ! ನಾನು ಹಾಗೇನಾದ್ರೂ ಮಾಡಿದ್ರೆ ನಮ್ಮಜ್ಜಿ ವಜ್ರ ತಿಂದು ಪ್ರಾಣ ಬಿಡ್ತಾರೆ ಅಷ್ಟೆ! ನಾನು ಅಪ್ಪ, ಅಮ್ಮ ಒಪ್ಪಿದ ಗೌರಮ್ಮನ್ನೇ ಮದುವೆ ಆಗೋದು..."
"ಹುಂ... ಹೌ ಡು ಯು ನೋ ಯು ವಿಲ್ ಬಿ ಹ್ಯಾಪಿ...?"
"ಐ ಡೋಂಟ್ ನೋ. ಐ ಜಸ್ಟ್ ಬಿಲೀವ್! ನೀವು ಮರೆತುಬಿಟ್ಟಿದೀರಾ ಆಂಟಿ. ಇನ್ ಇಂಡಿಯಾ, ವಿ ಜಸ್ಟ್ ಬಿಲೀವ್!"

ಮುಂದುವರೆಯುವುದು....

## Matrimonial

Alliance invited for a Kuraba Gowda Kannada speaking Girl, DOB-10-07-1997, Uttara Nakshatra, Simha Rashi, Height - 5.1”
B.E - Engineer in Electronic & Telecommunication.
Working Currently with Infosys Mumbai from 4 years.
Expectation: Well-educated & well settled Family.

Contact: 9699504855 (Mother) 9322175852 (Father)




# PUZZLES & TEASERS

## I. WORD PUZZLES:


1. MT_TF_S What are the missing letters? Why?
2. It's got twists and turns, but has no curves. Twist it to fix it, turn it to ruin it. What is it?
3. Thousands of these come together to make a digital image. What is it?
4. What is it that makes tears without sorrow and takes its journey to heaven?
5. What is it something that you always have but you always leave behind?

## II. LOGICAL PUZZLES:


A)




B)





C)




How would you place the numbers 10, 20, 30, 40, 50, 60, 70, and 80 so that each side of the square adds up to 150?


D)



How would you place the numbers 2, 4, 6, 8, 10, 12,14 and 16 so that the numbers in the hexagon are equal to the two numbers in the circles added together on either side?

## III. WHAT DOES THE PUZZLES SAY:

I)




II)




## III. FIND THE NAME OF THE COUNTRY:

1). AIMALSO, 2) UAARCINGA, 3) ACAMORON, 4) ALOOMING, 5) HANDTAIL.

## PUZZLES & TEASERS ANSWERS

I. WORD PUZZLES: 1. MINIMUM, 2. NOTHING, 3. ALPHABET, 4. (SHIVER, EROTIC, ICICLE, LENGTH, THRASH), 5. CASCADE.

II. LOGICAL PUZZLES: A). “B”, B). “F”.

III. WHAT DOES THE PUZZLES SAY: I). EXCUSE ME, II). HE CAME FROM NOWHERE

*Compiled by: Mr Ananth Banwasi*

# ಗೊಂಬೆಗಳ ಹಬ್ಬ ನವರಾತ್ರಿ

ಅಕ್ಟೋಬರ್ 2ರಂದು ನವರಾತ್ರಿಯ ಮೊದಲ ದಿನ, ಪುರೋಹಿತರು ಮೈಸೂರು ಅಸೋಸಿಯೇಷನ್‌ನಲ್ಲಿ ಕಲಶ ಸ್ಥಾಪನೆ ಮತ್ತು ದೇವಿ ಪ್ರತಿಷ್ಠಾಪನೆಯೊಂದಿಗೆ ಪೂಜೆಯನ್ನು ನೆರವೇರಿಸಿದರು. ಈ ಬಾರಿ ನಾವು ಅಸೋಸಿಯೇಷನ್ ಅನ್ನು ವಿಭಿನ್ನವಾಗಿ ಅಲಂಕರಿಸಿ, ನಮ್ಮ ಮೈಸೂರು




ಸಂಪ್ರದಾಯದಂತೆ ಮೆಟ್ಟಿಲು ಮೆಟ್ಟಿಲಾಗಿ ಗೊಂಬೆಗಳನ್ನು ಜೋಡಿಸಿ ಹಬ್ಬವನ್ನು ಆಚರಿಸಿದೆವು, ಅರ್ಚಕರ ಮಂತ್ರ ಪಠಣೆಯನ್ನು ಅನುಸರಿಸಿ ಮಹಿಳೆಯರು ಲಲಿತಾ ಸಹಸ್ರನಾಮ ಮತ್ತು ಕುಂಕುಮಾರ್ಚನೆಯನ್ನು ಮಾಡಿ ದೇವಿಗೆ ಆರತಿ ಬೆಳಗಿದರು. ಒಂಬತ್ತು ದಿನಗಳ ಕಾಲ ಪ್ರತಿದಿನ ಪುರುಷರು ಮತ್ತು ಮಹಿಳೆಯರು ಲಲಿತಾ ಸಹಸ್ರನಾಮ ಪಠಣ ಮಾಡಿ ಕುಂಕುಮಾರ್ಚನೆ ಮಾಡಿದರು.

ಪ್ರತಿದಿನ ಎರಡು ಅವಧಿಯಲ್ಲೂ ಪೂಜೆ ನೆರವೇರಿಸಲಾಯಿತು ಮತ್ತು ಎರಡು ಅವಧಿಗಳಲ್ಲೂ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲಾ ಮಕ್ಕಳು ಭೇಟಿ ನೀಡಿದರು. ಅವರು ಗೊಂಬೆಗಳ ಪ್ರದರ್ಶನವನ್ನು ನೋಡಿ ಆಶ್ಚರ್ಯಪಟ್ಟರು. ಅವರು ಪ್ರಶ್ನೆ ಕೇಳಿದರು, ಕಥೆ ಹೇಳಿದರು, ಆರತಿ ಹಾಡು ಹಾಡಿದರು ಮತ್ತು ಸಂಗೀತದ ರಾಗಕ್ಕೆ ನೃತ್ಯ ಮಾಡಿದರು. ಈ ಎಲ್ಲ ಕಲಾಪ ನೋಡುವಂತಿತ್ತು ಅವರ ಉತ್ಸಾಹ ಮತ್ತು ಸಂತೋಷ ಎಲ್ಲವನ್ನು ಆವರಿಸಿತ್ತು.





ಹತ್ತನೇ ದಿನ ವಿಜಯದಶಮಿಯನ್ನು ಶಮಿ ಪೂಜೆಯೊಂದಿಗೆ ಆಚರಿಸಲಾಯಿತು. ಎಲ್ಲರೂ ಶಮಿ ಎಲೆಗಳನ್ನು ಹಂಚಿ ಪರಸ್ಪರ ದಸರಾ ಹಬ್ಬದ ಶುಭಾಶಯಗಳನ್ನು ಕೋರಿದರು ಮತ್ತು ಯುವಕರು ಹಿರಿಯರಿಂದ ಆಶೀರ್ವಾದ ಪಡೆದರು.

**ಮುಂಬರುವ ಕಾರ್ಯಕ್ರಮಗಳು**

**ನವೆಂಬರ್ 16, 2024, ಶನಿವಾರ ಸಂಜೆ 6.30ರಿಂದ**

**ಕನ್ನಡ ರಾಜ್ಯೋತ್ಸವದ ಅಂಗವಾಗಿ**

**'ನಾಡ ಹಬ್ಬ'**

**ಸದಸ್ಯರಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು.**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077